ಉಪನ್ಯಾಸ ಗ್ರಂಥಮಾಲೆ

೩೮೨

ಜನಪದ ಹಾಸ್ಯ

ಎಸ್. ಬಿ. ಶೀಲವಂತಮಠ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಡಿಶಂಬರ ೧೯೮೬

ಉಪನ್ಯಾಸ ಗ್ರಂಥಮಾಲೆ

೩೮೨

ಜನಪದ ಹಾಸ್ಯ

ಎಸ್. ಬಿ. ಶೀಲವಂತಮಠ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ಡಿಶಂಬರ, ೧೯೮೭

ಪ್ರಕಾಶಕರು :

ಎಸ್. ಬಿ. ನಾಯಕ
ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫೦೦೦ ಪ್ರತಿಗಳು
ಡಿಶಂಬರ, ೧೯೬೭

ಬೆಲೆ : ೫೦ ಪೈಸೆ

ಮುದ್ರಕರು :

ಹೊಂಬಾಳಿ ಪ್ರಿಂಟರಿ
ಕೋಯಿನ್‌ರೋಡ, ಹುಬ್ಬಳ್ಳಿ-೨೦.

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನೀರಿಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವುದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೮೧ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಅದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ಜಿ. ದೇಸಾಯಿ
ಕುಲಪತಿಗಳು

ಅರಿಕೆ

ಧಾರವಾಡ ಜಿಲ್ಲೆಯ, ರೋಣ ತಾಲೂಕಿನ ನಿಡಗುಂದಿ ಕೊಪ್ಪದಲ್ಲಿ ದಿನಾಂಕ ೭-೫-೧೯೮೫ ರಂದು ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗದ ೩೪೭ ನೆಯ ಉಪನ್ಯಾಸ ಶಿಬಿರದಲ್ಲಿ ನಾನು " ಜನಪದ ಹಾಸ್ಯ " ಎಂಬ ವಿಷಯದ ಮೇಲೆ ಮಾತನಾಡಿದ್ದೆ. ಆ ನನ್ನ ಉಪನ್ಯಾಸದ ವಿಸ್ತೃತ ರೂಪವೇ ಈ ಚಿಕ್ಕ ಪುಸ್ತಕ.

ಹಳ್ಳಿಯ ರೈತರ ಹಾಗೂ ಶ್ರಮಿಕರ ಸಂಪರ್ಕ ನನಗೆ ಸಾಕಷ್ಟಿದೆ. ಆದರೆ ಅವರ ಬಾಯಿಂದ ಹೊರಹೊಮ್ಮಿ ಬರುವ ಸಮಗ್ರ ಜನಪದ ಸಾಹಿತ್ಯದ ಗುಟ್ಟನ್ನು ರಟ್ಟು ಮಾಡುವದು ಇಲ್ಲಿ ಅಸಾಧ್ಯ. ಅನೇಕ ಮಹನೀಯರು ಈಗಾಗಲೇ ಜನಪದ ಸಾಹಿತ್ಯದ ವಿವಿಧ ಮುಖಗಳನ್ನು ಜನತೆಗೆ ದರ್ಶನ ಮಾಡಿಸಿದ್ದಾರೆ. ಹಲವು ತಜ್ಞರ ಗ್ರಂಥಗಳು, ಭಾಷಣಗಳು ನನಗಿಲ್ಲಿ ಊರುಗೋಲಾಗಿವೆ. ಮೇಲಾಗಿ ನಾನು ಆಗಾಗ ಕ್ಲಾಸಿನಲ್ಲಿ ವಿದ್ಯಾರ್ಥಿಗಳಿಗೆ ಹೇಳಿದ ಹಲವಾರು ನಗೆಹನಿಗಳು, ಹಾಸ್ಯ ಸನ್ನಿವೇಶಗಳು ಇಲ್ಲಿ ಮರುಕಳಿಸಿವೆ.

ಈ ಚಿಕ್ಕ ಪುಸ್ತಕದಲ್ಲಿ ಬಂದಂತಹ ಚತುರೋಕ್ತಿಗಳು, ಕತೆಗಳು, ಗಾದೆ-ಒಗಟುಗಳು ಮತ್ತು ಜನಪದ ಹಾಡುಗಳು-

ಮುಂತಾದವುಗಳಿಗೆ ನೆರವಾದ ಗ್ರಂಥಕರ್ತರಿಗೆಲ್ಲ ನಾನು ಋಣಿಯಾಗಿದ್ದೇನೆ.

ಈ ಸಂದರ್ಭವನ್ನು ಒದಗಿಸಿಕೊಟ್ಟ ಕರ್ನಾಟಕ ವಿಶ್ವ ವಿದ್ಯಾಲಯ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಅವರಿಗೆ ನನ್ನ ಕೃತಜ್ಞತೆಗಳು.

ಎಸ್. ಬಿ. ಶೀಲವಂತಮಠ

ಶ್ರೀ ಅನ್ನದಾನೇಶ್ವರ ಕಾಲೇಜು ನರೇಗಲ್ಲ

ಪರಿವಿಡಿ

೧. ಪ್ರಸ್ತಾವನೆ

ಸಮಗ್ರ ಮನುಕುಲದ ಈ ಬದುಕು ಸಮಸ್ಯೆಗಳ ಸರ-ಮಾಲೆ ಮಾನವನ ಬಾಳಿನ ಬಳ್ಳಿಯೊಂದಿಗೆ ಬಳಲಿಕೆಯು ಕರಿಕೆ ಹಬ್ಬಿ ಚಿಗಿಯುತ್ತಲೇ ಇರುತ್ತದೆ. ಚಿಂತೆಯು ಚಿತೆ ದಹಿಸುತ್ತಲಿರುತ್ತದೆ. ನಮ್ಮ ಬದುಕು ಸಮಸ್ಯೆಗಳಿಂದ ದೂರ ಸರಿಯಲಾರದು, ಚಿಂತೆಯಿಂದ ಮುಕ್ತವಾಗಲಾರದು.

ಪ್ರಕೃತಿ ಧರ್ಮದಂತೆ ಮಾನವನ ಸಹಜ ಬಾಳಿಗೆ ಸುಖ-ದುಃಖ, ನಗು-ಅಳು, ಹಸಿವು-ನೀರಡಿಕೆ, ಭಯ-ಭಕ್ತಿ, ಆಸೆ-ನಿರಾಸೆ, ಪ್ರೀತಿ-ಪ್ರಣಯ ಮುಂತಾದವುಗಳು ಹಾಸಿ-ಹೊಚ್ಚಿಕೊಂಡಿವೆ. ಇಂಥ ಈ ಜಗದ ಜಂಜಡವನ್ನು ಕ್ಷಣಕಾಲವಾದರೂ ಮರೆತು ನಗು-ನಗುತ್ತ ಬಾಳುವುದೇ ಮಾನವ ಸಹಜ ಧರ್ಮ.

"ಸಮಯ ಸಿಕ್ಕಾಗ ಸುಖಪಡುವದೇ ಬಾಳಿನ ಜೀವಾಳ" ವೆನ್ನುವಂತೆ ಶ್ರಮಜೀವಿಗಳಾದ ಹಳ್ಳಿಗರು ಸಹಜವಾಗಿಯೇ ರಸನಿಮಿಷಗಳ ರಸಿಕರು-ಬಂಟರು. ತಮ್ಮ ದಿನವಿಡಿಯ ಬದುಕಿನಲ್ಲಿ ಅವರು ತಮ್ಮವೇ ಆದ ಹಾಸ್ಯದ ಕೋಲ್ಮಿಂಚಿನಿಂದ ನಗೆಯ ಮಳೆ ಸುರಿಸಿದ್ದಾರೆ. ಆ ಮಳೆಯ ನೀರು ಹತ್ತಾರು ಕಡೆಗೆ ಜುಳು-ಜುಳು ನಿನಾದಗೈಯುತ್ತ ಹರಿದಿದೆ.

ಇನ್ನು ಹಲವೆಡೆಗೆ ಜೋಗದ ಜಲಪಾತದಂತೆ ಧುಮ್ಮಿಕ್ಕಿದೆ, ಅಲ್ಲಲ್ಲಿ ಮಡವುಗಟ್ಟಿದೆ, ಹುಚ್ಚುಹೊಳೆ ಕೊಚ್ಚಿಕೊಂಡು ಹರಿದಂತೆಯೂ ಇದೆ. ಅದೇನೇ ಇದ್ದರೂ ಅವರ ಸಾಹಿತ್ಯ ಸೃಷ್ಟಿಗೆ ನಾವು 'ನಮೋ' ಎನ್ನಲೇಬೇಕು. ಕಂಡುಂಡು ಸಂತೋಷ ಪಡಬೇಕು.

ಸಾಹಿತ್ಯ ಮತ್ತು ಜೀವನ ಒಂದೇ ನಾಣ್ಯದ ಎರಡು ಮುಖಗಳು. "ಕೈಯ್ಯಂ ಪಿಡಿದರೆ ಮೈತಾನೆ ಬರ್ಪುದು" ಎನ್ನುವಂತೆ ಸಾಹಿತ್ಯವನ್ನು ಹಿಡಿದರೆ ಸಮಗ್ರ ಮನುಕುಲದ ಬದುಕಿನ ಮೈಯಿ ಗೋಚರಿಸುತ್ತದೆ. ಒಂದು ನಾಡಿನ ಸಾಹಿತ್ಯ ಬೆಳೆಯಬೇಕಾದಲ್ಲಿ ಸಿಕ್ಕಿದಷ್ಟು ವಸ್ತುವನ್ನು ದಕ್ಕಿಸಿ ಕೊಳ್ಳಬೇಕಾಗುತ್ತದೆ. ಮಣ್ಣಿನ ಮಕ್ಕಳಿಂದ ಹೊರಹೊಮ್ಮಿ ಬಂದ ಈ ಜನಪದ ಸಾಹಿತ್ಯ ಆಯಾ ನಾಡಿನ ಜನಾಂಗದ ಪ್ರತಿಬಿಂಬವಾಗಿ, ಗತಿಬಿಂಬವಾಗಿ, ಸಂಸ್ಕೃತಿಯಬಿಂಬವಾಗಿದೆ. ಅಂತೆಯೇ ನಮ್ಮ ಜನಪದರು ಸಾಹಿತ್ಯ ಸರಸ್ವತಿಯ ಚೊಚ್ಚಿಲ ಮಕ್ಕಳು. ಇನ್ನುಳಿದವರು ಯಾರಿದ್ದರೂ, ಎಂಥವ-ರಿದ್ದರೂ ಮಲ್ಪಲು ಮಕ್ಕಳೇ ಸರಿ.

"ನಗುವೆ ಬಾಳು, ಅಳುವೆ ಗೋಳು" ಎಂಬುದನ್ನರಿತ ಹಳ್ಳಿಯ ಶ್ರಮಿಕರ ಬಾಳಿನಲ್ಲಿ ಹಾಸ್ಯವೇ ವಿಶ್ರಾಂತಿ. ಅವರ ಅಂತರಾಳದಿಂದ ಹೊರಹೊಮ್ಮಿ ಬಂದ ಭಾವವೇ ಭಾಷೆ ಯಾಗಿ, ಆ ಭಾಷೆಯೇ ಸಾಹಿತ್ಯವಾಯಿತು. ಅದಕ್ಕಾಗಿಯೇ "ಜನವಾಣಿ ಬೇರು ಕವಿವಾಣಿ ಹೂವು" ಎನ್ನುತ್ತಾರೆ. ಜನ ಪದ ಸಾಹಿತ್ಯ ನಿಸರ್ಗ ಸುಂದರಿಯಂತಿದ್ದು, ಅಲ್ಲಿ ರಸಿಕರ ರಸದೂಟವಿದೆ. ಪ್ರಣಯಿಗಳ ಶೃಂಗಾರವಿದೆ, ವಿರಹಿಗಳ

ಚಿತ್ತವಿಕಾರವಿದೆ. ಮೇಲಾಗಿ ತೇಜಃಪುಂಜವಾದ ಅನುಭವೋಕ್ತಿಗಳಿವೆ; ವಿಡಂಬನೆಗಳಿವೆ. ಅವರ ಸ್ವಚ್ಛಮನಸ್ಸು ಹಾಗೂ ಬಿಚ್ಚು ಮಾತುಗಳ ಭಾಷಾ ಬತ್ತಳಿಕೆಯಲ್ಲಿ ಭೂಮಿತಾಯಿ, ದೇವರು, ಧರ್ಮ, ಪ್ರೀತಿ-ಪ್ರಣಯ, ಶೃಂಗಾರ, ಸಾಹಸ, ಬಡತನ-ಶ್ರೀಮಂತಿಕೆ, ಬಂಜೆತನ, ಸೂಳೆತನ, ನಗು-ಅಳು ಎಲ್ಲವೂ ಇವೆ. ...

ಅಂತೂ ನಮ್ಮ ಜನಪದರು ಹಾಡಿದ್ದಾರೆ, ನಕ್ಕು ನಗಿಸಿದ್ದಾರೆ. ಅತ್ತು ಅಳಿಸಿದ್ದಾರೆ. ಸಮಗ್ರ ಸೃಷ್ಟಿಯೇ ಇವರಿಗೆ ಕಥಾವಸ್ತುವಾಗಿದೆ. ಹೀಗಾಗಿ ಇವರು ಬೇಲಿಯ ಮೇಲಿನ ಹೂವನ್ನೂ ಬಿಟ್ಟಿಲ್ಲ. ಕೈಲಾಸದಲ್ಲಿನ ಶಿವನನ್ನೂ ಮರೆತಿಲ್ಲ.

ದಿನನಿತ್ಯದ ತಮ್ಮ ಬದುಕಿಗೆ ಆಸರೆಯಾದ ಹಾಗೂ ಸ್ವತಃ ಕಂಡುಂಡ ವಸ್ತು-ವಿಷಯಗಳನ್ನೇ ಕೈಗೆಟಕುವ ಶಬ್ದಗಳಲ್ಲಿ ಬಾಳಿನ ವಿವಿಧ ಮುಖಗಳ ಸತ್ವವನ್ನು ಕಂಡರಿಸಿದ್ದಾರೆ. ಅವರ ಸಾಹಿತ್ಯ ಪ್ರತಿಮೆ ಅರಮನೆಯಿಂದ ಗುರುಮನೆಯುವರೆಗೂ ಪೂಜನೀಯವಾದುದು. ಅವರು ಚಿತ್ರಿಸಿದ ಆ ಜನಪದ ಸಾಹಿತ್ಯ ಮೂರ್ತಿ ಹಿಡಿದರೆ ಹಿಡಿತುಂಬ, ಬಿಟ್ಟರೆ ಜಗತುಂಬ.

೨. ಶ್ರಮಿಕ ರೈತರು; ಅಂದು, ಇಂದು

ನಮ್ಮ ಹಳ್ಳಿಗರ ಬಾಯಿಂದ ಹೊರಹೊಮ್ಮಿ ಬಂದ ಈ ಜನಪದ ಸಾಹಿತ್ಯವಿಂದು ಬರಡಾಗತೊಡಗಿದೆ. ಅಂದಿನ

ಅವರ ಚಿರಂತನ ಸ್ಫೂರ್ತಿಯ ಸೆಲೆಯಿಂದು ಬತ್ತತೊಡಗಿದೆ. ಹೀಗೆಯೇ ಆಗುತ್ತ ಹೋದರೆ ಭವಿಷ್ಯದಲ್ಲಿ ಈ ಜನಪದ ಸಾಹಿತ್ಯಕ್ಕೆ ಭೀಕರ ಬರಗಾಲ ಖಚಿತ. ಆದರೆ ಅದೆಷ್ಟೋ ಮಹನೀಯರು ನಾಡಿನ ಉದ್ದಗಲಕ್ಕೂ ಅಲೆದಾಡಿ ತಗ್ಗು-ದಿನ್ನೆಗಳನ್ನು ಇಳಿದೇರಿ, ಹಳ್ಳಿಗರನ್ನು ಸಂದರ್ಶಿಸಿ, ಹಾಡನ್ನು ಹಾಡಿಸಿ, ಕತೆಗಳನ್ನು ಹೇಳಿಸಿ-ಕೇಳಿಸಿ ಪುಸ್ತಕ ರೂಪಕ್ಕೆ ತಂದಿದಾರೆ. ಇತ್ತೀಚಿಗೆ ವಿಶ್ವವಿದ್ಯಾಲಯಗಳು, ಹಲವು ಸಾಹಿತ್ಯ ಸಂಘ-ಸಂಸ್ಥೆಗಳು ಈ ದಿಶೆಯಲ್ಲಿ ಕಾರ್ಯಪ್ರವೃತ್ತವಾದದ್ದು ಅಭಿನಂದನೀಯ. ಇಲ್ಲವಾದಲ್ಲಿ ಕಿಚ್ಚಿನಲ್ಲಿ ಬಿದ್ದ ಕೀಡೆಯಂತೆ ಈ ಸಾಹಿತ್ಯ ಮಣ್ಣಲ್ಲಿಯೇ ಮರೆಯಾಗಿ ಹೋಗುತ್ತಿತ್ತು.

ಈ ಜನಪದ ಸಾಹಿತ್ಯವೊಂದು "ತವನಿಧಿ". ಆದರೇನು ಮಾಡುವದು ? ಇಂದು ಈ ಜನಪದರು ತಮ್ಮ ನೈಸರ್ಗಿಕ ಸಾಹಿತ್ಯ ಸೃಷ್ಟಿಸುವ ವಾತಾವರಣದಿಂದ ದೂರ ಸರಿದಿದ್ದಾರೆ. ಅವರ ಸಾಹಿತ್ಯಭೂಮಿ ಈಗ ಬಂಜರವಾಗುತ್ತ ನಡೆದಿದೆ. ಅಂದೊಮ್ಮೆ ಕೊಯ್ಲಿಗೆ ಬಂದ ಆ ಸಾಹಿತ್ಯ ಫಸಲನ್ನು ಒಕ್ಕಿ, ಕಣಜ ತುಂಬಿಕೊಂಡವರು ಪುನಃ ಬಿತ್ತುವ ಗೋಜಿಗೆ ಹೋಗೇ ಇಲ್ಲ. ಜನಪದ ಸಾಹಿತ್ಯಜನಕರಾದ ಆ ರಸರಸಿಕರು ಇಂದಿಲ್ಲವೆಂದೇ ಹೇಳಬೇಕಾಗಿದೆ.

ಬಹಳಷ್ಟು ಜನ ಹಳ್ಳಿಗರು, ಒಕ್ಕಲಿಗರು, ಶ್ರಮಿಕರು ಹಾಗೂ ವಿವಿಧ ಕಸಬುದಾರರು ಆಲಸಿಗಳಾಗಿದ್ದಾರೆ. ಮೇಲಾಗಿ ಸಾಲ-ಶೂಲಗಳಲ್ಲಿ ಕೊಳೆಯುತ್ತಿದ್ದಾರೆ. ಕೇವಲ ಈಗೀಗ ಮಾತ್ರ ಒಕ್ಕಲಿಗ ಸಾಲ ಮಾಡುತ್ತಾನೆಂದು ನಾವು ಭಾವಿಸ ಬಾರದು. ಈ ಹಿಂದೆಯೂ ಆತ ಸಾಲ ಮಾಡಿ ಎತ್ತು

ಗಳನ್ನು ಕೊಂಡಿದ್ದ. ಆದರೆ ಆಗಿನ ಕಾಲದ ರೈತರು ತಾವು ತಕ್ಕೊಂಡ ಸಾಲದ ಸದುಪಯೋಗ ಮಾಡಿಕೊಂಡು ಸಹಾಯ ಮಾಡಿದವರನ್ನು ನೆನೆದಿದ್ದಾರೆ.

ಕರಿಯೆತ್ತು ಕಾಳಿಂಗ, ಬಿಳಿಯೆತ್ತು ಮಾಲಿಂಗ
ಸರಕಾರವೆತ್ತು ಶಿವಲಿಂಗ...ಹೋಽಽಽಹೊಲೆನ್ನೆಲೊ"

ಎಂದು ಮುಂತಾಗಿ ಹಾಡುವುದನ್ನು ಗಮನಿಸಿದಾಗ ಬಹುಶಃ ಶಿವಲಿಂಗ ಎಂಬ ಎತ್ತನ್ನು ಸರಕಾರದ ಸಾಲ-ಸಹಾಯ ದಿಂದಲೇ ಕೊಂಡಿರಬಹುದು.

ಆದರೆ ಈಗೀಗ ಅವರಿಗೆ ಸರಕಾರವೆಂದರೆ ದರಕಾರ ಇಲ್ಲ. ಚಹ-ಚುಟ್ಟಾ-ಚಿಲಿಮಿಗೂ ಸರಕಾರದಿಂದ ಸಾಲ ಪಡೆದು ದಕ್ಕಿಸಿಕೊಳ್ಳಬಲ್ಲರು. ಬಾವಿಯನ್ನು ತೋಡಿಸಲು ಸಾಲ ತಕ್ಕೊಂಡ ರೈತನ ಹೊಲಕ್ಕೆ ಸರಕಾರದ ಅಧಿಕಾರಿಗಳು ಹೊಲವನ್ನೆಲ್ಲ ಹುಡುಕಿದರೂ ಯಾವ ಮೂಲೆಯಲ್ಲಿಯೂ ಬಾವಿ ಕಾಣದಿದ್ದಾಗ "ಸಾಹೇಬ್ರ ಬಾವಿ ಕಳುವಾಗಿದೆ" ಎಂದು ಹೇಳುವ ಮತ್ತು ಹೇಳಿದ ಭೂಪರೂ ಇದ್ದಾರೆ. ಒಟ್ಟಾರೆ ಅಂದೊಮ್ಮೆ ಸಂಸ್ಕೃತಿಯ ಕಣಜಗಳಂತಿದ್ದ ಹಳ್ಳಿಗಳಿಂದು ಆಲಸ್ಯದ ಕೇಂದ್ರಗಳಾಗಿ, ಷೋಕಿ ಜೀವನದ ಬ್ರ್ಯಾಂಚ್ ಗಳಂತೆ ಬದಲಾವಣೆ ಹೊಂದಿವೆ. ಹಲವು ಹಳ್ಳಿಗಳಂತೂ ಮೇಲೆ ಹೇಳಿದ ಸಂಗತಿಗಳಿಗೆ ಹೇಳಿ ಮಾಡಿಸಿದಂತಿವೆ. ಮೇಳಿ ಯನ್ನು ಹಿಡಿಯುವ ಕೈಗಳಿಂದು ಓಸಿ ಚೀಟಿಯನ್ನು ಹಿಡಿದಿವೆ: ಬಗಲಲ್ಲಿ ನೀರು ತುಂಬಿದ ತತ್ರಾಣಿಗೆಯ ಬದಲಿ ಟ್ರಾನ್ಸಿಸ್ಟರ್ ವಿರಾಜಮಾನವಾಗಿದೆ. ಎಂಟು ಮೊಳದ ಧೋತರವೂ ಭಾರ

ವಾಗಿ ಮೂರು ಮೊಳದ ಲುಂಗಿಗೆ ಶರಣಾಗತನಾಗಿದ್ದಾನೆ. ಇವೇನೇ ಇರಲಿ ಒಟ್ಟಿನ ಮೇಲೆ ಆತನಿಂದು ಉಂಡು ಬದುಕದೆ ತಿಂದು ತಿರುಗುತ್ತಿದ್ದಾನೆಂದು ಹೇಳಬಹುದು.

ಯಂತ್ರೋಪಕರಣಗಳ ಆಗಮನದಿಂದ ಸಾಮೂಹಿಕವಾಗಿ ಮಾಡುತ್ತಿದ್ದ ಕೆಲಸಗಳನ್ನಿಂದು ಏಕೈಕನಾಗಿಯೇ ಮಾಡುತ್ತಿದ್ದಾನೆ. ಅಂದು ತೆನೆರಾಶಿ ಮಾಡಲು ಇಡೀ ರಾತ್ರಿ ಹಂತಿ ಕಟ್ಟಿ ಕಣದಲ್ಲಿ ಹತ್ತಿಪ್ಪತ್ತು ಜನಗು ಹಂತಿ ಪದಗಳನ್ನು ಪೈಪೋಟಿಯಿಂದ ಹಾಡುತ್ತಿದ್ದರು. ಆದರಿಂದು ? ಕಲ್ಲಿನ ರೂಲಿನಿಂದ ಮಧ್ಯಾಹ್ನದಲ್ಲಿಯೇ ರಾಶಿಮಾಡಿ ಮುಗಿಸುತ್ತಾನಾದ್ದರಿಂದ ಹಂತಿ ಪದಗಳು ಹಂತ ಹಂತವಾಗಿ ಕೇಳಿಸದ ಹಾಗಾದವು.

ರೈತ ಮಟ್ಟಿ (ಯಾತ) ಹೊಡೆಯುವಾಗ ಹಾಡಿದ್ದು ಕಡಿಮೆಯಲ್ಲ. ಪಂಪಸೆಟ್ಟುಗಳ ಆವಿಷ್ಕಾರದಿಂದ ಅವನ ಆ ಹಾಡಿಗೂ, ಆನಂದಕ್ಕೂ ಪೆಟ್ಟು ಬಿದ್ದಿತು. ಮದುವೆ ಸಮಾರಂಭಗಳಲ್ಲಿ, ಬೀಗರನ್ನು ಇದಿರುಗೊಳ್ಳುವಾಗ, ನಡೆಯುತ್ತಿದ್ದ ಬೀಗರ ಪರಸ್ಪರ ಹಾಡುಗಳು ಜನಮನವನ್ನು ಸೂರೆಗೊಳ್ಳುತ್ತಿದ್ದವು. ಮನೆಯ ಮುಂದೆ ಹಂದರ (ಚಪ್ಪರ) ಹಾಕಿ ಉಂಡುಟ್ಟು ನಕ್ಕು ನಲಿದಾಡುತ್ತಿದ್ದರು. ಮೋಜು ಮಜಲುಗಳಂತೂ ಕರ್ಣಪೀಯೂಷವಾಗಿದ್ದವು. ಆದರೆ ಈಗೀಗ ಅವೆಲ್ಲ ಸವಕಲು ನಾಣ್ಯಗಳಾಗಿವೆ. [ಆರ್ಥಿಕ ದೃಷ್ಟಿಯಿಂದ ಈಗಿನದೂ ಒಳ್ಳೆಯದೆ.] ದೇವಸ್ಥಾನ ಮುಂತಾದೆಡೆಗಳಲ್ಲಿ ಮದುವೆ ಏರ್ಪಾಡು ಈಗೀಗ ನಡೆಯುವದರಿಂದ ಹಾಡು-ಗೀಡುಗಳ ಗೋಜಿಗೆ ಹೋಗಲಾರರು. ಅಕಸ್ಮಾತ್ ಪುರೋಹಿತರು

ಅಯ್ಯನವರು ಶಾಸ್ತ್ರೋಕ್ತ ಮಂತ್ರ ಹೇಳತೊಡಗಿದರೆ ತುದಿ ಗಾಲ ಮೇಲೆ ನಿಂತ ಆ ಜನ "ಮುಗಸ್ರಿ-ಮುಗಸ್ರೀ ನಿಮ್ಮ ಮಂತ್ರ. ನಾಳೆ ಅಷ್ಟು ಇರಲಿ ಬಾಯಿಪಾಠ ಮಾಡಿದ್ದೆಲ್ಲ ಇದೊಂದೇ ಲಗ್ನದಾಗ ಹೇಳಬ್ಯಾಡ್ರಿ" ಎಂದು ಅವರನ್ನು ಸಮರ್ಪಯಾಮಿಗೇನೇ ಓಡಿಸಿಕೊಂಡು ಬರುತ್ತಾರೆ.

ಇನ್ನು ಅಲ್ಲಲ್ಲಿ ಹಲವು ಮದುವೆಗಳು ಮನೆಯ ಮುಂದೆ ನೆರವೇರಿದರೂ ಸಹ ಆ ಹಿಂದಿನ ಆದ್ದೂರಿಯ ಸಂಪ್ರದಾಯ ಇನ್ನೆಂದು ಬಂದೀತು ? ಮುಂಜಾನೆಗೆ ಬೀಗರು ಬಂದು, ಮಧ್ಯಾಹ್ನ ಜಗಳಾಡಿ, ಸಾಯಂಕಾಲಕ್ಕೆ ರಾಜಿ ಮಾಡಿಕೊಂಡು ಊಟದ ಶಾಸ್ತ್ರ ಮುಗಿಸಿ, ಸಂಜೆಗೆ ತಮ್ಮ ತಮ್ಮ ಊರಿಗೆ ಹಾಜರಿ ಹಾಕುತ್ತಾರೆ. ಹೀಗಾಗಿ ಈ ಸೋಬಾನದ ಹಾಡು ಗಳು ಮತ್ತು ಬೀಗರ ಹಾಡುಗಳು ಈಗೀಗ ಹೇಳ ಹೆಸರಿಲ್ಲ ದಂತಾಗುತ್ತಿವೆ.

ಕುಟ್ಟುವದು-ಬೀಸುವದಂತೂ ಈಗೀಗ ಬಹು ದೂರೇ ಉಳಿಯಿತು. ಹಿಟ್ಟಿನ ಗಿರಣಿ ಬಂದು ಬೀಸುವ ಕಲ್ಲುಗಳು ಬಚ್ಚಲು ಮೋರಿಯಾದವು. ಮುಂದಿನ ಪೀಳಿಗೆಯ ಜನ 'ಒಳ್ಳು' 'ಬೀಸುವಕಲ್ಲು'ಗಳನ್ನು ವಸ್ತು ಸಂಗ್ರಹಾಲಯ ದಲ್ಲಿಯೇ ನೋಡಬೇಕಾಗುತ್ತದೆ. ಬೀಸುಕಲ್ಲಿನ ಪದಗಳಿಗಂತೂ ನಮ್ಮ ಜನಪದಸಾಹಿತ್ಯದಲ್ಲಿ ಸಿಂಹಪಾಲು. "ಆದಾವು ನಮ ಜೋಳ ಉಳಿದಾವು ನಮಹಾಡು" ಎಂದು ಹಾಡಬೇಕಾದರೆ ಅವರಲ್ಲಿ ಆ ಪದಗಳ ಅಗಣಿತ ಸಂಗ್ರಹವಿತ್ತೆಂದು ಆಶ್ಚರ್ಯ ವಾಗದಿರದು.

ಕಾರಹುಣ್ಣಿಮೆ, ಪಂಚಮಿಹಬ್ಬ, ಮಹಾನವಮಿ, ಗೌರಿ ಹಬ್ಬ, ಹೋಳಿಹುಣ್ಣಿಮೆ, ಮುಂತಾದವುಗಳು ಈಗೀಗ ಮುಸುಕು ಹಾಕಿಕೊಂಡು ಸಪ್ಪಳಿಲ್ಲದೇ ಬಂದು-ಹೋಗುತ್ತವೆ. ಹೀಗಾಗಿ, ಇಂದು ನಮ್ಮ ಹಳ್ಳಿಯ ಶ್ರಮಿಕರೂ ಸಹ 'ಕಾಲಾಯ ತಸ್ಮೈ ನಮಃ' ಎಂದು ಶರಣು ಹೋಗಿದ್ದರಿಂದ ಈ ವೈವಿಧ್ಯಮಯ ಜನಪದ ಸಾಹಿತ್ಯದಿಂದ ವಂಚಿತರಾಗಿದ್ದಾರೆ.

೩. ಜನಪದ ಹಾಡಿನಲ್ಲಿ ಹಾಸ್ಯ

ನಮಗಿಂದು ಹಾಡಿನ ರೂಪದಲ್ಲಿ ದೊರೆಯುವ ಜನಪದ ಸಾಹಿತ್ಯವೇ ಅತ್ಯಂತ ವೈಶಿಷ್ಟ್ಯಪೂರ್ಣವಾದುದು. ಜನಮನ ವನ್ನು ಸೂರೆಗೊಂಡ ಈ ಜನಪದ ಹಾಡುಗಳಲ್ಲಿ ಅಣಕ, ವ್ಯಂಗ್ಯ, ಚೇಷ್ಟೆ, ಕುಚೇಷ್ಟೆಗಳಿಗೇನೂ ಕೊರತೆಯಿಲ್ಲ. ಅಪ ಹಾಸ್ಯ ಚತುರೋಕ್ತಿ ಮುಂತಾದವುಗಳು ಸರಸ ಸಂಭಾಷಣೆ ಗಳ ಮುಖಾಂತರ ಹರಿಹಾಯ್ದು ಎಂಥವರ ಚಿತ್ತಭಿತ್ತಿಯ ಮೇಲೂ ಪ್ರಭಾವ ಬೀರುತ್ತವೆ.

ಬಿಚ್ಚು ನುಡಿಯ ಬಂಟರಾದ ನಮ್ಮ ಜನಪದರು ತಮ್ಮ ತೆರೆದ ಮನಸ್ಸಿನಿಂದ ಲೋಕವನ್ನು ಕಂಡಿದ್ದರಿಂದ ಮುಚ್ಚು-ಮರೆಯಿಲ್ಲದೇ ತಮ್ಮ ಕಣ್ಣಿಗೆ ಕಂಡದ್ದನ್ನು; ಮನಸ್ಸಿಗೆ ನಾಟಿ ದ್ದನ್ನು ಹಾಡಿದ್ದಾರೆ. ಹಲವು ಕಡೆಗೆ ಇವರಲ್ಲಿ ಸುಸಂಸ್ಕೃತ ಹಾಸ್ಯವನ್ನು ಕಾಣದಿರಬಹುದು. ಹಸಿಗೋಡೆಗೆ ಹಳ್ಳ ಒಗೆದ ಹಾಗೆ ನೇರವಾಗಿ ಇವರು ಹೇಳಿದ್ದೇ ಜಾಸ್ತಿ. ನಿಬ್ಬಣವಿರಲಿ, ಕೋಲಾಟವಿರಲಿ, ಹಂತಿಯ ಹಾಡುಗಳೇ ಇರಲಿ, ಏನಿದ್ದರೂ ಪರಸ್ಪರ ಮೇಳಗಳಲ್ಲಿ ಪೈಪೋಟಿ ನಡೆದಾಗ ಇವರಲ್ಲಿ ಎಲ್ಲಿ

ಲ್ಲದ ಸ್ವಪ್ರತಿಷ್ಠೆಯನ್ನು ಕಾಣುತ್ತೇವೆ. ತಮ್ಮದೇ ಮಿಗಿಲೆಂಬ ಭಾವನೆ ಎಲ್ಲೆಲ್ಲೂ ಎದ್ದು ಕಾಣುತ್ತದೆ. ಬಿದ್ದರೂ ಮೀಸೆಗೆ ಮಣ್ಣು ಹತ್ತಿಲ್ಲವೆನ್ನುವ ಹಟಮಾರಿತನವೂ ಇವರಲ್ಲಿದೆ. ಒಟ್ಟಾರೆ ನಕ್ಕು ನಗಿಸಬೇಕಾದರೆ ಇವರು ಏನನ್ನಾದರೂ ಅನ್ನುತ್ತಾರೆ, ಹೇಳಿ-ಹಾಡುತ್ತಾರೆ.

ಕೆಲಕೆಲವು ಹಾಡುಗಳಲ್ಲಿ ಇವರು ವಿಡಂಬನೆಯ ವೀರ ರಾಗಿ ಮೆರೆದಿದ್ದಾರೆ. ಆದರೆ ಹಲವು ಕಡೆಗೆ ಇವರ ಸಂಸ್ಕಾರದ ಶ್ರೀಮಂತಿಕೆ ಸಿಗುವದು ದುಸ್ತರದ ಮಾತಾಗುತ್ತದೆ. ನಮ್ಮ ಜನಪದರಿಗೆ ಹಣಮುಖ್ಯವಲ್ಲ, ನಗೆ ಮುಖ್ಯವೆಂದು ಕಾಣುತ್ತದೆ. ಅಂತೆಯೇ ಒಂದೆಡೆಗೆ ದ. ರಾ. ಬೇಂದ್ರೆಯವರು "ಹುಸಿನಗುತ ಬಂದೇವ, ನಸುನಗುತ ಬಾಳೋಣ, ತುಸುನಗುತ ತೆರಳೋಣ। ಬಡನೂರು ವರ್ಷಾನ ಹರುಷಾದಿ ಕಳೆಯೋಣ–ಯಾಕಾರೆ ಕೆರಳೋಣ" ಎನ್ನುವಲ್ಲಿ ವ್ಯಕ್ತವಾಗುತ್ತದೆ. ನಮ್ಮ ಜನಪದರು ನಕ್ಕರೆ ಚಂದ ಕಾಣಿಸುತ್ತೇವೆಂದು ಸುಮ್ಮನೇ ತೋರಿಕೆಯ "ಬಿನಾಕಾ" ನಗೆ ನಗದೇ ಮನಸಾ ನಕ್ಕಿದ್ದಾರೆ. ಅವರ ನಗೆಯಲ್ಲಿ, ಹಾಸ್ಯ-ವಿನೋದಗಳಲ್ಲಿ ಮಿಂಚಿನ ಸಂಚಾರವಿರುತ್ತದೆ.

ನಗೆಯನ್ನು ಹುಡುಕಲು ಅವರೆಲ್ಲೂ ತಿರುಗಾಡದೇ ತಮ್ಮ ಜೀವನ ರಂಗವನ್ನೇ ಅನುಭವ ರಂಗವನ್ನಾಗಿರಿಸಿಕೊಂಡರು. ನಿಸರ್ಗದತ್ತವಾಗಿ ಬಂದ ತಮ್ಮ ಪ್ರತಿಭೆಯ ಬಲದಿಂದ ಬರೆಹ ಬಾರದೇ ಬಾಯಿಂದ ಏನೆಲ್ಲವನ್ನೂ ಗುಣುಗುಟ್ಟಿದ್ದು ಅಚ್ಚರಿಯೇ ಸರಿ. ಒಟ್ಟಾರೆ ತಮ್ಮ ದುಡಿಮೆಯ

ದಣಿವನ್ನು ಹಾಡಿನ ಹರುಷದಲ್ಲಿ ಕಳೆದುಕೊಂಡರು. ಹಾಸ್ಯದ ಹಸಿರಿನಲ್ಲಿ ಇವರೆಲ್ಲ ಮೈಮರೆತು ಇತರರನ್ನೂ ಮೈಮರೆಯಿಸಿದರು.—ಇವೆಲ್ಲವುಗಳಿಗೆ ಉದಾಹರಣೆಗೆಂದು ಪ್ರಪ್ರಥಮವಾಗಿ ಇಲ್ಲಿ ಬೀಗರ ಹಾಡುಗಳಲ್ಲಿನ ಹಾಸ್ಯ-ಅಪಹಾಸ್ಯ, ಅಣಕ, ಕಟಕಿ, ವ್ಯಂಗ್ಯ, ಚುಚ್ಚುನಗೆ, ಬಿಚ್ಚುನಗೆ ಮುಂತಾದವುಗಳನ್ನು ನೋಡಬಹುದು.

ಬೀಗರ–ಹಾಡು :

ಚೂರು ಹೋಳಿಗಿ ಚೂಜಿಲೆ ತುಪ್ಪ ।
ಸೂರಿ ಮಾಡ್ಯಾಳವ್ವ ಬೀಗತಿ ।
ನಮ್ಮೂರ ತನಕ ಕೀರತಿ ॥

ಎಲ್ಲರೂ ಕಟ್ಟ್ಯಾರ ಗುಳ್ಳೀಬ್ಯಾಳಿಮಣಿ ।
ಬೀಗತಿ ಕಟ್ಟ್ಯಾಳ ಕೈಪಾಳಿ । ಅವರಣ್ಣ ।
ಬೀಸಲಿಕ್ಕಿಲ್ಲಂತ ಕಸಗೊಂಡ ॥

ಎಲ್ಲಾರು ಕಟ್ಟ್ಯಾರ ಮಲ್ಲಿಗಿ ಹೂವಿನ ದಂಡಿ ।
ಬೀಗೂತಿ ಕಟ್ಟ್ಯಾಳ ಹುಲ್ಲಿನ ಪೆಂಡಿ । ಬೀಗ ತಾ
ಬೋಳೆತ್ತಿಗಿಲ್ಲಂತ ಕಸಗೊಂಡ ॥

ಒಂದು ಅಡಕಿ ಒಡದು ಒಂಬತ್ತು ಲಗ್ನಮಾಡಿ ।
ಇಂದೀನ ಖರ್ಚು ಬಲು ಖರ್ಚು । ಎಂದ ಬೀಗ
ಕಂಬದ ತೆಕ್ಕಿ ಬಿಡವೊಲ್ಲ ॥

ದುಡ್ಡೀನ ಎಲಿ ತಂದು, ದುಡ್ಡೀನ ಅಡಿಕೆ ತಂದು
ಗುಡ್ಡವ ಹಾಕ್ಯಾರ ನಡುಮನೆಗೆ। ಬೀಗರು
ಗುಡ್ಡ ತಿಂದಾರ ಜನದಾಗ ॥

ಮಾವನ ಕುದರೀಯು ಸಿಂಗಾರ ಏನವ್ವ।
ದಾಗೂಡಿಬಳ್ಳಿ ಕಡಿವಾಣ। ಹಿಡಕೊಂಡು
ಹಾರ್‍ಯಾನ-ಹಾರಿ ಹತ್ಯಾನ ॥

ಹಾರಿ ಹತ್ತುದರೊಳಗ ಹಾಳ ಹಗೆದಾಗ ಬಿದ್ದ
ಸುಸಿಹತ್ತಿ ಮಾವ ಹಸಗೆಟ್ಟ। ಅವರವ್ವ
ಬಿಸಿಲಿಗ್ಹಾಕುದಕ ಮರತಾಳ ॥

ಬೀಗ-ಬೀಗೂತಿ ಕೂಡಿ ಬಾಗಿಲಕ ನಿಂತಾರ।
ಬಾಗಿಲದ ತಳಿರು ತೋರಣ। ಹರಿಹರಿದು
ಹಸಿವಾಗಿ ಕರಕರ ತಿಂದಾರ ॥

ಪ್ರೇಮ–ಪ್ರಣಯ :

ಸಣ್ಣನಾಮದ ರಂಗ ಸುಣ್ಣಕ್ಕೆ ಬರುತಾನೆ।
ಸನ್ನೆ ಬಲ್ಲ ಹೆಣ್ಣೆ ಒಳಗೀರೆ। ರಂಗಯ್ಯ
ಸುಣ್ಣಕ್ಕೆ ಬರುವ ಬಗೆ ಬೇರೆ ॥

ಸುಣ್ಣಕ ಬಂದಾಳ ಸೊನ್ನಿಯ ಮಾಡ್ಯಾಳ।
ಹೆಣ್ಣೆಂತದವ್ವ ಹೊಯ್ಮಾಲಿ। ನನ ಮಗ
ಉಣ್ಣು ಎಡೆಯಾಗ ಕೈತೊಳಿದ ॥

ಚಿತ್ರ ಚಿನ್ನನ ಪ್ಯಾಲ, ಗ್ಯಾನ ಗೆಣೆಯನ ಮ್ಯಾಲ
ಚಿತ್ತಾರದ ಕೊಡಪ ತಲಿಮ್ಯಾಲ । ಹೊತಗ್ಹೊಂಡು
ಹೊತ್ತೇರಿ ನೀರು ತರುವಳ ॥

ಇಂಥ ಹಲವಾರು ಪದಗಳಲ್ಲಿ ಹಳ್ಳಿಗರ ಪ್ರೀತಿ-ಪ್ರಣಯ ವ್ಯಕ್ತವಾಗಿದ್ದು ವಿದಿತವಾಗುತ್ತದೆ.

ರಂಗ ಸುಣ್ಣದ ನೆವಮಾಡಿ ಈಕೆಯ ಮನೆಗೆ ಬರುವದನ್ನು ಅವರವ್ವ ಒಳಗೊಳಗೇ ಗುರುತಿಸಿದ್ದಾಳೆ. ಅಂತೆಯೇ ರಂಗನ ಮಂಗನಾಟಕ್ಕೆ ಮಗಳು ಮನಸೋತಾಳೆಂಬ ಭಯದಿಂದ ಮಗಳನ್ನು ಒಳಗೆ ಕಳಿಸುತ್ತಾಳೆ. ಇಂಥಲ್ಲಿ ಸೂಕ್ಷ್ಮತೆ ಇದೆಯಾದರೂ, ಇನ್ನು ಕೆಲವು ಹಾಡುಗಳಲ್ಲಿ ಪ್ರಣಯದ ಪರಿಯನ್ನು ಬಿಚ್ಚುಮಾತುಗಳಲ್ಲಿ ಹೇಳಿದ್ದಾರೆ. ಉದಾಹರಣೆಗೆ-

ಮುಂಜಾನೆ ಏಳುವಳು ಮೂರೊಟ್ಟಿ ತಿನ್ನುವಳು
ಗಂಡ ಬಂದಾಗ ನೆಳ್ಳುವಳು । ಗೆಣೆಯ
ಬಂದಾಗ ನಗುವಳು ॥

ಎನ್ನುವಲ್ಲಿ ಹೆಣ್ಣಿನ ಪ್ರಣಯಾಂತರಂಗವನ್ನು ತೆರೆದು ಇಟ್ಟಂತಿದೆ.

ಇನ್ನು ಜೀವನದಲ್ಲಿ ಅನಿರೀಕ್ಷಿತ, ಅಸಹಜ ಹಾಗೂ ಅಸ್ವಾಭಾವಿಕ ಘಟನೆಗಳು ನಗೆ ತರಿಸುತ್ತವೆ. ಹರೆಯದ ಹುಡುಗ-ಹುಡುಗಿಯರ ಪರಸ್ಪರ ಪ್ರೇಮ-ಪ್ರಣಯ-ಪ್ರೀತಿಗಳು ಹಳ್ಳಿಯಾಗಿರಲಿ, ಪಟ್ಟಣವಾಗಿರಲಿ ಎಲ್ಲಿಯಾದರೂ ಇರುವುದು ಸಹಜ. ಆದರೆ ಇದಕ್ಕೆ ಹೊರತುಪಡಿಸಿ ಬಚ್ಚಬಾಯಿ ಮುದುಕ-

ಮುದುಕಿಯರು ಪ್ರಣಯದ ಪರಿದಾಟದಲ್ಲಿ ಸಿಲುಕಿದ್ದನ್ನು ಕಂಡಾಗ ನಗೆ ಬಾರದಿರುತ್ತದೆಯೇ ? ನಮ್ಮ ಜನಪದ ಸಾಹಿತ್ಯದಲ್ಲಿ ಇಂಥವುಗಳಿಗೇನೂ ಕೊರತೆಯಿಲ್ಲ.

ಮುದುಕನಿಗೆ—ಮುದಿಕೀಗೆ ಎಲ್ಲೆಲ್ಲಿ ಮಾತಾಯ್ತು ।
ಮುತ್ತುಗದ ಮರದ ಬಡ್ಡೇಲಿ । ಮುದುಕಯ್ಯ
ಮುದುಕೀಗೆ ಮುದ್ದು ಕೊಡುತಿದ್ದ ॥

ಮುದುಕ ಮುದಕೀ ಕೂಡಿ, ಮುದಕವಿ ಸಂತೆಗ್ಹೋಗಿ ।
ಮುದಕಿ ಬೇಡ್ಯಾಳ ಕುಲಾಯಿ । ಆ ಮುದಕ
ಕಟಬಗರಿ ಕಂಡ ಕೊಡಸಂತ ಅಳತಾನೋ ॥

ಎನ್ನುವಲ್ಲಿ "ಹಂಗಾಮು ಮೀರಿದ ಮೇಲೆ ಸಿಂಗಮ್ಮ ಲಗ್ನ ಆದಳಂತ" ಎನ್ನುವ ಅವರ ಮಾತಿನಂತೆಯೆ. ಹದಮೀರಿದವರ ಬೇಡಿಕೆ—ನೀಡಿಕೆಗಳು, ಆಸೆ—ಆಕಾಂಕ್ಷೆಗಳು ಹಾಸ್ಯಾಸ್ಪದಕ್ಕೆ ತುತ್ತಾಗುತ್ತವೆ.

ಕುಂಬಾರ ನಿನಗ್ಯಾಕೋ ಗೊಂಬೆ ಮೊಟದ ಹೆಣ್ಣು ।
ತುಂಬೆಂದ ಮಣ್ಣು ತುಳಿಯೆಂದು । ಮನೆ-ಮನೆಗೆ
ಹೊತ್ತು ಮಾರೆಂದ ಹೊಸ ಮಡಕೆ ॥

ಹೀಗೆ ಕುಲಕಸಬುಗಳ ಪರಂಪರೆಯ ಹಿನ್ನೆಲೆಯಲ್ಲಿ ಹೆಣ್ಣು-ಗಂಡಿನ, ಗಂಡ—ಹೆಂಡತಿಯರಲ್ಲಿ ಉಂಟಾಗುವ ಆಂತರಿಕ ಭಾವವನ್ನು ಸೂಕ್ಷ್ಮವಾಗಿ ಬಿಡಿಸಿದ್ದಾರೆ.

ಇದೇ ಬಗೆಯ ಹಲವು ಹಾಸ್ಯ ಪ್ರಧಾನವಾದ ಹಾಡುಗಳು "ಜನಪದ ತ್ರಿಪದಿಗಳು"[1] ಮತ್ತು "ಗರತಿಯ ಹಾಡು"[2] ಗಳಲ್ಲಿವೆ.

ಊಟಕ ಉಡಕೇರಿ ತ್ವಾಟಕ ಬೆಳ್ಳೋಡಿ
ಸಾಲವಾಳಿಗಿ ಸೌಂದತ್ತಿ । ಹುಡುಗಿಯು
ಸಾರಿಗಿ ಹೊಡೆಯುವವನ ಬಿಡಲಿಲ್ಲ ॥

ಎಂಟೆತ್ತಿನ ಹಳಿಬಂಡಿ ಒಬಒಲದ ಬರುವಾಗ ।
ಹೊಲಗೇರಿ ಕೆಳಗ ನಗಮುರದ । ಆ ಊರ
ಸೆಟ್ಟೆನ್ನ ಹುಡುಗಿ ನಡು ಮುರದ ॥

ಆನೀಯ ಕೊಳ್ಳಾಗ ಆರೇಳಿ ಸರಪಳಿ ।
ಆರ್‍ಯಾರ ಹುಡಗೀಯ ಗೆಳೆತನ । ಮಾಡಿದರ
ಆರೆಮ್ಮಿ ಹೈನ ಉಣಸ್ಯಾಳೋ ॥

ಪತ್ತಾರ ಮನಿಮುಂದ ಅತ್ತ—ಅತ್ತು
ಹೇಳ್ಯಾಳೋ ।
ಸತ್ತ ಮಾಡಿಸಿ ಕೊಡೋ ನನ್ಗ । ನನ ಗೆಣೆಯಾ ।
ಹೊತ್ತೇರು ತನಕ ಬಿಡಬ್ಯಾಡೋ ॥

ಪೂಜಾರ ಹುಡುಗೀ ಮೋಜು ಎಷ್ಟಂತ ಹೇಳಲಿ ।
ಕಾಜಿನ ಬಳಿ ಕೈತುಂಬ । ಇಟಗೊಂಡು
ಕರಕರದ ಪರಸಾದ ಕೊಡತಾಳೋ ॥

ಹೋಳಿ ಹುಣ್ವೆ ಬಂತಂತ ಬಾಳ ಹೋಳಿಗಿ
ಮಾಡಿ ।
ಕಾಳೆಮ್ಮಿ ತುಪ್ಪ ಎಡಿ ಮಾಡಿ । ಗೆಣೆಯಾಗ
ಹೋಳ ಬಾಯಿಮಾಡಿ ಉಣಸ್ಯಾಳೊ ॥

ಹೋಳಿ ಹುಣ್ವಿ ಬಂತು ನಾಳೆ ಯುಗಾದಿ ಬಂತು ।
ಬಾಳೆ ಮಾಡುವ ದಿನ ಬಂತು । ಈ ಊರ
ಸೂಳೇರಿಗಿ ಬಂತು ವನವಾಸ ॥

ಹೆಸರೀಗಿ ರಬಕವಿ ಮೊಸರೀಗಿ ನೀರಿಲ್ಲ ।
ಕುಸಲದ ಸಿಂಬಿ ಬರಿಗೊಡ । ಬಾಲ್ಯಾರು
ಉಸ್ಸೆಂದು ಬಾವಿ ಇಳಿದಾರ ॥

ಚಂದಕ ನಿಂಬರಗಿ ಗಂಧಕ ನೀರಿಲ್ಲ ।
ಟೆಂಗಿನ ಪರಟಿ ಬರಿಗೊಡ । ಬಾಲ್ಯಾರ
ರಂಭ್ಯಾರ ಜಗಳ ಬರತ್ಯಾಗ ॥

ತಂಜೂರ ತಾವರಗೇರಿ ಇಂಬುಳ್ಳ ಜಮಖಂಡಿ ।
ಜಂಬ್ಯಾಳ ತೆಳಗ ಜಂಬಟ್ಟಿ । ಜಾಡರ ಹುಡುಗಿ
ಎಮ್ಮಿ ಕಟ್ಯ್ಯಾಳ ಗೆಣೆಯಾಗ ॥

ಇಂಥ ಹಲವಾರು ಹಾಡುಗಳಲ್ಲಿ ಪ್ರೀತಿ—ಪ್ರಣಯ ಮೊದಲ್ಮಾಡಿಕೊಂಡು ಆಯಾ ಊರಿನ (ವರ) ಜೀವ–ಜೀವಾಳ ವನ್ನು, ಮತ್ತು ಅವರ ಮನೋಗತವನ್ನು ಭಟ್ಟಿ ಇಳಿಸಿದ್ದಾರೆ. ಇನ್ನು ಕೆಲವೆಡೆಗೆ ಈ ಜನಪದ ಹಾಡುಗಳಲ್ಲಿ ಬುದ್ಧಿ ಹೇಳಿದ್ದರೆ, ಹಲವು ಹಾಡುಗಳಲ್ಲಿ ಆಯಾ ಊರಿನ ನೀರಿನ ಕೊರತೆಯನ್ನು, ಒರತೆಯನ್ನು ಮೊದಲ್ಮಾಡಿಕೊಂಡು ಪ್ರಣಯದ ಒಟ್ಟಂದವನ್ನು ಹದವರಿತು ಹೆದರಿಕೆಯಿಲ್ಲದೆ ಹಾಸ್ಯವನ್ನು ಸೂರೆಗೈದಿದ್ದಾರೆ.

ಆರೇರ ಹುಡುಗಿ ಕರೆ ಎಮ್ಮಿಯನ್ನು ಕಟ್ಟಿರಲಿ, ಬಿಡಲಿ, ನಿತ್ತ ಮಾಡಿಸಿಕೊಟ್ಟರ ಹೊತ್ತೇರುತನಕ ಗೆಣೆಯಾನ ಹತ್ತಿರ

ಇರತೇನಿ ಅಂತ ಅನ್ನಲಿ, ಅನ್ನದಿರಲಿ; ಅಥವಾ ಇವಳೇ ತನ್ನ ಮುತ್ತಿನ ನತ್ತನ್ನೂ ಅವನಿಗೆ ಓಸಿ, ಇಸ್ಪೀಟು ಆಡಾಕ ಕೊಟ್ಟಿರಲಿ – ಏನಿದ್ದರೂ ನಮ್ಮ ಈ ಹಳ್ಳಿಯ ಜನರು ರಸವತ್ತಾದ ಸನ್ನಿವೇಶಗಳನ್ನು ಸ್ವಲ್ಪೇ ಶಬ್ದಗಳಲ್ಲಿ ಏನೆಲ್ಲವನ್ನೂ ಹಿಡಿದಿಟ್ಟು ಜನಮನವನ್ನು ಸೂರೆಗೊಳ್ಳುವುದರಲ್ಲಿ ಎತ್ತಿದ ಕೈ.

ಇನ್ನು ಹೊಸದಾಗಿ ಗಂಡನ ಮನೆಗೆ ಬಂದಂತಹ ಹೆಣ್ಣಿಗೆ ನೆರೆಹೊರೆಯ ಕೆಲವರು ಹೆಚ್ಚಿನ ಸಲಿಗೆಯಿಂದ ಚೇಷ್ಟೆ ಮಾಡುವುದು ಸಹಜ. ಗಂಡನ ಮನೆಯಲ್ಲಿ ಬಾಳುವೆ ಮಾಡುವ ಹೆಣ್ಣಿಗೆ ಗಂಡನ (ಅ) ವಿಶ್ವಾಸ. ಪಕ್ಕದ ಮನೆ ಯಾಕೆ ಇವಳ ಮನಸ್ಸು ನೋಡಲು,

> "ಚಿಂತಾಕು ಇಟಗೊಂಡು ಚಿಪ್ಪಾಡಿ ಬಡಿವಾಕಿ
> ಚಿಂತಿಲ್ಲ ಏನ್ ನಿನಗ। ನಿನಗಂಡ
> ಅಲ್ಲೊಬ್ಬಳ ಕೂಡ ನಗತಿದ್ದ ॥"

ಎಂದು ಮುಂತಾಗಿ ಮಾಡಿದ ಚೇಷ್ಟೆಗೆ "ಹೆದರಿಕೆ ಇದ್ದಲ್ಲಿಯೇ ಹೊತ್ತು ಮುಳುಗಿತು" ಎನ್ನುವಂತೆ ಅದು ನಿಜವೆಂದೇ ತಿಳಿದು ಹಲವರು ಅತ್ತದ್ದೂ ಉಂಟು. ಇನ್ನು ಹಲವರು 'ಸುಳ್ಳ ಬಿಡss ಸುಮ್ಮಕ ಯಾಕ ಹೇಳತಿ...' ಎಂದು ನಗುವವರೂ ಇದ್ದಾರೆ.

> ನಕ್ಕರ ನಗಲೆವ್ವ ನಗಮುಖದ ಕ್ಯಾದಿಗಿ
> ನಾ ಮುಚ್ಚಿ ಮುಡಿವ ಪರಿಮಳದ ಹೂವ
> ಅವಳೊಂದು ಅರಗಳಿಗಿ ಮುಡಿಯಲಿ ॥

ಹೀಗೆ ಕಪ್ಪೆಯ ಮೇಲೆ ಹಿಡಿ ಅರಲು ಒಗೆದಂತೆ ಹೇಳುವವರು ಅದೆಷ್ಟು ಮಹಾಮನಸ್ಸಿನ ಹೆಣ್ಣುಮಕ್ಕಳು ಸಿಕ್ಯಾರು ?

ಇನ್ನೊಬ್ಬ ಹೆಣ್ಣು: ಭ್ರಮರ ಗುಣ-ಜಾತಿಯ ತನ್ನ ಗಂಡನ ಮೇಲೆ ಸಂಶಯ ಬಂದು ಕೇಳುತ್ತಾಳೆ—

ಎಲ್ಲಿ ಹೋಗಿದ್ದಿ ರಾಯ ಸೆಲ್ಲ್ಯಾಕ ಮಾಸ್ಯಾದ
ಅಲ್ಲೊಬ್ಬಳ ಕೂಡ ಸಲಗೀಯ। ನೀನ್ ಮಾಡಿ
ಇಲ್ಲೆಂಬುದೇನ ನನ ಮುಂದ ॥

ಎಂದು ಮುಂತಾಗಿ ಬಹು ಸರಳ-ಸಹಜವಾಗಿಯೇ ಕೇಳಿದಳು. ಆತನಂತೂ ನಿಜಾಂಶ ಹೇಳಲಾರ. ಯಾಕೆಂದರೆ ಗೊತ್ತೇ ಇದೆಯಲ್ಲ, ಹೇಳಿದರೆ ಮನೆ ಕುರುಕ್ಷೇತ್ರವಾದೀತೆಂಬ ಭಯ ! ಯಾಕೆಂದರೆ ಒಂದು ಹೆಣ್ಣು ಏನನ್ನಾದರೂ ಸಹಿಸಿಕೊಳ್ಳುತ್ತದೆ, ಆದರೆ ಮತ್ತೊಂದು ಹೆಣ್ಣನ್ನು ಸಹಿಸಿಕೊಳ್ಳುವದು ಅವಳಿಂದಾಗದು. ಹಳ್ಳಿಯಲ್ಲಿ ಹೇಳುತ್ತಾರೆ; "ಸವತ್ಯಾರು ವಿಷದ ಸವತಿಕಾಯಿಗಳು", ಕಳ್ಳುಸುಕಿನಲ್ಲಿ ನಡೆದಷ್ಟೇ ಭಯ ಹಾಗೂ ಜಾಗ್ರತೆ ಇರಬೇಕು ಇಂಥ ಹೆಣ್ಣುಗಳ ಸಂಗಡ ವ್ಯವಹರಿಸುವಾಗ. ಹೆಜ್ಜೆ ತಪ್ಪಿಟ್ಟರೆ ತಲೆಯೇ ಮುಳುಗೀತು ! ಇಂಥ ಇಕ್ಕಟ್ಟಾದ ಪ್ರಸಂಗಗಳಲ್ಲಿಯೂ ಸಹ ಏನೇನೋ ಹೇಳಿ ಪಾರಾಗುವ ಶ್ರೀಕೃಷ್ಣ ಪರಮಾತ್ಮರಿಗೇನೂ ಕೊರತೆಯಿಲ್ಲ.

ಇನ್ನು ಹಲವು ಹೊಯ್ಮಾಲಿ ಹೆಣ್ಣುಗಳಿರುತ್ತವೆ. ಅವರದೂ ಒಂದು ಮೋಜು ! ರೈತ ತನ್ನದೇ ಆದಂತಹ ಹಿತ-ಮಿತ ಬಾಳಿನ ಚೌಕಟ್ಟಿನಲ್ಲಿ ಮನೆಕಟ್ಟಿ, ಒಲೆಹೂಡಿ,

ಸತಿಪತಿಗಳೊಂದಾಗಿ ಬಾಳ್ವೆ ನಡೆಸುವಾಗ ಪರಸ್ಪರ ನೋಡಿ ನಕ್ಕಿರಬಹುದು. ಮಾತಾಡಿ ನಕ್ಕು ನಗಿಸಿರಬಹುದು. ಇಂಥ ದೊಂದು ಸನ್ನಿವೇಶ ಇಲ್ಲಿದೆ—

ಬಸಿರು ಬಯಕೆಯು ಹುಚ್ಚುಹಿಡಿದ ಸತಿಪತಿಗಳು ಸಾರಾ ಸಾರ ವಿಚಾರಿಸದೇ ಮಾತಾಡಿ ಕಲ್ಪನೆಯ ಕುದುರೆಯನ್ನೇರಿ ಕೊನೆಗೆ ಪಶ್ಚಾತ್ತಾಪ ಪಟ್ಟರು.

ಬಸರಿದ್ದೇನ್ನೆಸರಿನ್ನೇನಿಡೋಣ ? (ಸಂಗ್ರಹ)

ಸತಿಪತಿಕೂಡಿ ಜೋಡಿ ಹಿತದಿಂದ ಮಲಗಿದಾಗ

ಹೆಂಡತಿ : ನಿನ್ಮುಂದೆ ಮಾತೊಂದು ಬಿಚ್ಚಿ-ಮುಚ್ಚಿ ಹೇಳ್ತೀನು ಬಸರಿದ್ದೇನ್ಹೆಸರೇನಿಡೋನು ?

ಗಂಡ : (ಹಿಗ್ಗಿ ನಕ್ಕು) ಸುಳ್ಳ ತಗಿ, ಗಾಳಿಮಾತ ನನ್ಮುಂದ ಹೇಳಬ್ಯಾಡಾ ಹಿಂಥಾ ಹೊಯ್ಮಾಲಿತನ.

ಹೆಂಡತಿ : ಔ ಶಿವನ ! ಎಂಥಾ ಮಾತ ? ತಿಂಗಳಮ್ಯಾಲ ಒಂದಿನ ಆತ. ಮುಂದಿಹಾಂಗ ನಾ ಸುಳ್ಳ ಹೇಳಾ ಕೆಲ್ಲ ಸುಮ್ಮಕ !

ಗಂಡ : ಹೌದsss ! ಕುರುಬರಂಥ ಅರಬರಂಡಿ, ಜಬರದಿಂದ ಬೇದ್ಹೇಳ್ತೇನಿ । ಅರಬಿಸಹಿತ ಮಾಡ ಕೂಸಿಗೆ ಮೆತ್ತಗ ಹಾಸೂದಕ । ಕೆಟ್ಟ ತೊಟ್ಲ ನಾ ಕಟ್ಟಾಂವಲ್ಲ । ನಿಂತ ತೂಗ ಅಳುವಾಗ । ಬಿಟ್ಟ ಹೊರಗ ಹೋದ ರೊದ್ದು ಮುರದೇನಿ ಸೊಂಟ ।

ಮಕ್ಕಳ ಮಾರಿ ಇದ್ದಿದ್ದಿಲ್ಲ ಇಂದಿನ ತನಕಾ......।
....।

ಮುಂದೆ ಮಾತಿಗೆ ಮಾತು ಬೆಳೆದು ಗಂಡು ಹಡೆಯುವದೋ, ಹೆಣ್ಣು ಹಡೆಯುವದೋ ಎಂಬ ಮಾತಿನ ತುರುಸಿಗಾಗಿ ಗಂಡ ಹೆಂಡತಿಯನ್ನು ಬಡಿದು ಹೊಲಗೆಲಸಕ್ಕೆ ಹೋದ. ಇತ್ತ ಈಕೆಯ ಹೊಲಿ ಹೋಯಿತು. ಗಂಡ ಹೊಲದಿಂದ ಬಂದ ಮೇಲೆ ಈ ಹೊಯ್ಯಾಲಿ ಅನ್ನುತ್ತಾಳೆ:

"ನೀ ನನ್ನ ಬಡಿಬಾರ್ದಿತ್ತ । ಕೂಸಿಗೆ ಪೆಟ್ಟು ಪೂರಸ್ತ ।
ಹೆಣ್ಣಲ್ಲ ಗಂಡ ಹುಟ್ಟಿತ್ತ । ಥೇಟ ಹೋಲಿಕಿ
ನಿನ್ಹಾಂಗಿತ್ತ ॥
ಆಗ ಗಂಡ ಅಳತಾನ ಭೋರ್ರ್ಯಾಡಿ ಕುಂತ......
ಮೊದಲ ದೇವರ ಕೊಡಬಾರದಿತ್ತSS" ॥

ಇಲ್ಲಿ ಗಂಡನ ಬೋಳೆತನಕ್ಕೂ, ಹೊಯ್ಯಾಲಿ ಹೆಂಡತಿ ಸೋಗಲಾಡಿ ಸುಬ್ಬಕ್ಕನ ಮಾತಿನ ಚಾತುರ್ಯಕ್ಕೂ ನಗದೇ ಇರಲಾರರು.

೪. ಜನಪದ ಗಾದೆಗಳಲ್ಲಿ ಹಾಸ್ಯ

ಗಾದೆಮಾತುಗಳು ಆಯಾ ನಾಡಿನ ಜನಾಂಗದ ಹಾಗೂ ಜನಜೀವನದ ಪ್ರತಿಬಿಂಬಗಳು. ಗಾದೆಗಳು ತ್ರಿವಿಕ್ರಮನಂತೆ ಬೆಳೆದು ನಿಂತಿವೆ. ವ್ಯವಹಾರ ಜ್ಞಾನದಿಂದ ಪರಿಪೂರ್ಣವಾಗಿ

ಮನಾಕರ್ಷಕವಾಗಿರುತ್ತವೆ. ಅಕ್ಷರ ಕಲಿಯದ ಜನ ವಿದ್ಯೆಯಿಂದ ವಂಚಿತರಾಗಿದ್ದರೂ ಬುದ್ಧಿಯಲ್ಲಿ ಬಹುಬಲ್ಲಿದರೆಂಬುದಕ್ಕೆ ಈ ಗಾದೆಮಾತುಗಳೂ ಸೇರಿದಂತೆ ಇನ್ನೂ ಹಲವಾರು ಸಾಕ್ಷಾಧಾರಗಳನ್ನು ಕೊಡಬಹುದು. 'ಗಾದೆಗಳು ವೇದಕ್ಕೆ ಸಮ' ವೆಂದು ಹೇಳುತ್ತಾರೆ.

ಆಡು ಮುಟ್ಟದ ತಪ್ಪಲು ಇಲ್ಲ, ಗಾದೆಮಾತುಗಳಿಲ್ಲದ ಜನಪದ ಸಾಹಿತ್ಯವಿಲ್ಲ. ದಿನ ನಿತ್ಯದ ಹಳ್ಳಿಯ ಬಾಳಿನ ಗೋಳಾಟ, ನಗು-ನಲಿವು, ಆಚಾರ-ವಿಚಾರ, ದೇವರು-ಧರ್ಮ, ಮೂಢನಂಬಿಕೆ, ಕುಲಾಚಾರ, ಮತಾಚಾರ, ವೃತ್ತಿ-ಪ್ರವೃತ್ತಿ, ಶ್ರೀಮಂತಿಕೆ, ಬಡತನ, ಬಂಜೆತನ, ಕಾಮ-ಪ್ರೇಮ-ಪ್ರಣಯ, ಮಳೆ-ಬೆಳೆ, ಬೀಗರು, ನೆರೆಹೊರೆಯುವರು, ಆಟ, ಊಟ— ಹೀಗೆ ಏನುಂಟು ಏನಿಲ್ಲ ಈ ಗಾದೆಗಳಲ್ಲಿ ?

ನೇಗಿಲಯೋಗಿಯಿಂದ ಹೊರಹೊಮ್ಮಿ ಬಂದ ಈ ಗಾದೆಗಳು ಶಿವಯೋಗಿಗೂ ಆಪ್ಯಾಯಮಾನ, ಆಬಾಲವೃದ್ಧರಿಗೂ ಅಷ್ಟೇ ಆಕರ್ಷಕ. ಒಟ್ಟಾರೆ ಗಾದೆಗಳಲ್ಲಿ ಇಲ್ಲದ್ದು ಹೊರಜಗತ್ತಿನಲ್ಲಿ ದೊರೆಯುವದು ದುರ್ಲಭ. 'ಕೋಶ ಓದದಿದ್ದರೂ ದೇಶ ನೋಡು' ಎಂದು ಹೇಳುವದು ಇದಕ್ಕಾಗಿಯೆ. ಆದರೆ ಈ ಗಾದೆಗಳೇ ಜೀವನದ ಸಾರಸರ್ವಸ್ವವಲ್ಲ. ಜನಜೀವನದಿಂದಾಯ್ದು ಸಾರ ಸಾರಾಯವು ಮಾತ್ರ ಈ ಗಾದೆಗಳಲ್ಲಿದೆ. ಗಾದೆಗಳು ಹೇಗಿದ್ದರೂ ಸುತ್ತುವರಿದು ನೀತಿಗೇನೇ ನೇತು ಬೀಳುತ್ತವೆ. ನಗೆ, ತಿಳುವಳಿಕೆ, ಜೀವನಾನುಭ, ಸಂಸ್ಕಾರ, ಸಂಸ್ಕೃತಿ ಮುಂತಾದವುಗಳು ಗಾದೆಗಳಲ್ಲಿ ಬಿಡಿ-ಬಿಡಿಯಾಗಿಯೂ, ಹಿಡಿ-ಹಿಡಿಯಾಗಿಯೂ ದೊರಕುತ್ತವೆ.

ಹಾಸ್ಯಕ್ಕೆಡೆಗೊಡುವ ಗಾದೆಮಾತುಗಳಲ್ಲಿ ಹೆಚ್ಚಾಗಿ ಕೊಂಕುನಗೆ, ಅಣಕ, ಹಾಗೂ ಅಪಹಾಸ್ಯಗಳೇ ಜಾಸ್ತಿ. ಅದೇನೇ ಇದ್ದರೂ ಮನಸ್ಸಿನ ಬೇಸರಿಕೆಯನ್ನು ಕಳೆದುಕೊಳ್ಳಲು ಸಮಾಜದಿಂದ ಸಿದ್ಧಗೊಳಿಸಿದ ಸಿದ್ಧೌಷಧಿಗಳಿವು. ಆತ್ಮ ಪರಿಮಳವನ್ನು ಪಸರಿಸುವ ಪರಿಪಾಕದಂತಿರುವ ಈ ಗಾದೆಗಳಲ್ಲಿ ಯಾವ ಬಗೆಯ ನಗೆ ಬಂದರೂ ನಾವು ಸ್ವಾಗತಿಸಬೇಕು, ಸ್ವೀಕರಿಸಬೇಕು.

ನಾನಂತೂ ಇಲ್ಲಿ ಹಾಸ್ಯಕ್ಕೆಡೆಗೊಡುವ ಹಲವು ಗಾದೆಗಳನ್ನು ಸಂಗ್ರಹಿಸಿ ಕೊಟ್ಟಿದ್ದೇನೆ. ಅವುಗಳನ್ನು ಓದಿ ನಗದಿದ್ದರೆ ನನ್ನ ತಪ್ಪಲ್ಲ !

೧) ಅಗ್ಗ ಸೂರೆ ಅನ್ನವೆಂದು ಸೀರೆ ಬಿಚ್ಚಿ ಉಂಡಳು.

೨) ಅಜ್ಜಾ ಮದುವೆ ಅಂದರೆ ಯಾರಿಗೆ ನಂಗಾ ಅಂದನಂತೆ.

೩) ಅಗ್ಗದ ಚಪ್ಪಲಿ ಕಾಲಿಗೆ ಮೂಲ.

೪) ಅತ್ತೆ ಸತ್ತು ಆರ ತಿಂಗಳ ಮೇಲೆ ಸೊಸೆ ಕಣ್ಣಲ್ಲಿ ನೀರ ಬಂತು.

೫) ಆಸತ್ತು-ಬೇಸೊತ್ತು, ಅಕ್ಕನ ಮನೆಗೆ ಹೋದ್ರೆ, ಅಕ್ಕನ ಗಂಡ ಆವುರ್ ಅಂದನಂತ.

೬) ಅಯುಗಾರ ಮನಿ ಹೆಣ್ಣಲ್ಲ, ಅಯ್ಯನಾರ ಮನಿ ಎತ್ತಲ್ಲ. ಆಡಕ್ಕೊಳ್ಳಾಕ ಬಂದವರಿಗೆ ಹಿಡಕೊಂಡ ಮಾಡಾಂವಾ.

೭) ಇದ್ದವರ ಆನಿ ಏರಿದರ ಇಲ್ಲದವರ ಕುಳಬಾಸ ಏರಿ ನನ್ನ ನೋಡೇ ಕೆರಕೊಂಡ್ರು ಅಂತಿದ್ರಂತ.

೮) ಉದ್ದನ್ನಾಕಿ ಗಂಡ ಸಂತ್ಯಾಗ ಅಳತಿದ್ನಂತ.
ಗಿಡ್ಡನ್ನಾಕಿ ಗಂಡ ಹೊಳ್ಯಾಗ ಅಳತಿದ್ನಂತ.

೯) ಉಸರ ಇಲ್ಲದವ ಬಸರ ಮಾಡಿದರ,
ಉಚ್ಚಿಹೊಯ್ಯೋದರಾಗ ಉಚ್ಚಿ ಬಿತ್ತಂತ.

೧೦) ಉಡಿಕೆ ಗಂಡನಲ್ಲ, ಗುಳ್ಳವ್ವ ದೇವರಲ್ಲ.

೧೧) ಉಂಡ ತಿಂದ ಮಗಳ ಗಂಡನ್ನ ಬೇಡಿ ಅತ್ತಿದ್ಲಂತ.

೧೨) ಉಣ್ಣಾಕ ಜ್ವಾಳ ಇಲ್ಲಾ, ಉಂಡ ಹೋಗನೀ, ಮಲ್ಲಯ್ಯನ ಆಣಿ ಆದೀತು.

೧೩) ಊರಿಗೆ ಊಟದ ಚಿಂತಿ, ನಾಯಿಗೆ ಪತ್ರೋಳಿ ಚಿಂತಿ.

೧೪) ಒಬ್ಬ ಮಗಾ ಅಂತ ಒಂಬತ್ತಬ್ಯಾರಿ ಸುಂತಿ ಮಾಡಿಸಿದರ ಇದ್ದಟನ್ನ ಇಲಿ ಕಡಕೊಂಡ ಹೋತಂತ.

೧೫) ಒಪ್ಪತ್ತುಂಡುವ ಯೋಗಿ, ಎರಡ್ಪೊತ್ತುಂಡುವ ಭೋಗಿ, ಮೂರ್‍ಹೊತ್ತುಂಡವ ರೋಗಿ, ನಾಲ್ಕೊತ್ತುಂಡವನನ್ನು ಹೊತ್ತಗೊಂಡು ಹೋಗಿ.

೧೬) ಕಸಗೊಂಡ ಹೋದ್ರ ಕಿಸಗೊಂಡ ಕುಂತರಂತ.

೧೭) ಕದರಿನಂತ ಬೇತಾಲ್ಯಾಗ ಕುದುರಿಯಂತ ತೇನ.

೧೮) ಕಡಿಲಾರದ ಕತ್ತಿ ಕೈಯಾಗಿದ್ರೇನ, ಮಾಡಲಾರದ ಗಂಡಸ ಮಗ್ಗಲದಾಗಿದ್ರೇನ.

೧೯) ಕದ್ದ ಮದುವೆ ಮಾಡಕೋತೇನಿ, ಬಗ್ಗಿ ಓಲಗಾ ಊದು ಅಂದ್ರಂತ.

೨೦) ಕೆಲಸ ಇಲ್ಲದಾಂವ ಏನ್ ಮಾಡತಿದ್ನಂದ್ರ, ಮನಸ ಇಲ್ಲದಾಕಿ ಮಾರಿ ನೋಡತಿದ್ನಂತ.

೨೧) ಕಳು ಮಾಡಾಕ ಹೋಗಿ ಕೆಮ್ಮಿದಾಂಗ.

೨೨) ಕುಡಗೋಲು ನುಂಗಿದವನ ಮುಕುಳಿ ಹರೀತೇತಿ.

೨೩) ಕುರುಡಿಗೆ ಚೆನ್ನಕ್ಕಾ ಅಂದ್ರೆ, ಅವಳಿಗೆಷ್ಟೋ ಹಿಗ್ಗು.

೨೪) ಕುಡ್ಡ ಕುಲಗೇಡಿ, ಡೂಗ ಅಡ್ನಾಡಿ.

೨೫) ಕುಡ್ಡ ಕುಗ್ರಾಮು, ಕುಂಟ ಹರಾಮು.

೨೬) ಕುಂಟರಿಗೆ ಮನಿ ಸಾರಸಾಕ ಹಚ್ಚಿ ಎಂಟಮಂದಿ ಎತ್ತಿ ಹಿಡಿದರಂತ.

೨೭) ಕೆಂಪು ಮೀಸೆಯವರನ್ನು, ಕೊತ್ತಿಗಣ್ಣಿನವರನ್ನು ನಂಬಬೇಡ.

೨೮) ಕುಲಕರ್ಣ್ಯಾರ ಮನಿಗೆ ಹೋದ್ರೆ, ಕುಂಡರಸಿ ಮೂರ ರೂಪಾಯಿ ದಂಡ ತಗೊಂಡರಂತ.

೨೯) ಕುಂಯಕ್ ಅಂದರ ಕುಂಡಿ ಕೊಯ್ಯೋತಾರ.

೩೦) ಗಂಡನೂ ಹೊಡೆದ, ಸೋಮವಾರ ಒಪ್ಪತ್ತು.

೩೧) ಗೆಣ್ಯಾನ ಉಚ್ಚಿ ಚೆಲ್ಲಾಕು ಬ್ಯಾಡಾ, ಕುಡ್ಯಾಕು ಬ್ಯಾಡಾ.

೩೨) ಪೋರಿ ಕಟಗೊಂಡ ಬ್ಯಾರೆ ಆಗಬೇಡ. ಹೋರಿ ಕಟಗೊಂಡ ಹೊಲಾ ಮಾಡಬೇಡ.

೩೩) ಹಸಗೇಡಿನ್ನ ತಂದ ಹಾಸಗ್ಯಾಗ ಹಾಕಿದ್ರ ಮಿಸಿಗ್ಯಾಡಿ ಮೂರಮಳ ಕವದಿ ಹರದಿತ್ತಂತ.

೩೪) ಹುರಕಿನಾಕಿ ಕೈ ನೋಡಬಾರದು, ಸುಂಬಳಬುರಕಿ ಮೈ ನೋಡಬಾರದು.

೩೫) ಹಂತವರ ಹಂತಾವರ ಕೂಡಿ ಸಂತಿಗೆ ಹೋದ್ರ ಸಂತ್ಯಾಗಿಬ್ಬರ ಹಂತಾವರ ಇದ್ರಂತ.

೩೬) ಹೇಡಿ ಬೆನ್ನ ಕಟ್ಟಬಾರದು, ಹೇಸಿ ನಿಬ್ಬಣಕ ಹೋಗಬಾರದು.

೩೭) ಹೆಂಗಸ ತಿರಗ್ಯಾಡಿ ಕೆಟ್ಟತಂತ, ಗಂಡಸ ಮನ್ಯಾಗ ಕುಂತ ಕೆಟ್ಟತಂತ.

೩೮) ಹದಗಡ್ಡಿ ಎದ್ದಾವ ಅಂದರ ನನಗೊಂದು ಬಗಸಿ ಅಂದ್ನಂತ.

೩೯) ಹಾರ್‍ವರ ತೊತ್ತಾಗಬೇಡ, ಗಾಣಿಗನ ಎತ್ತಾಗ ಬೇಡ.

೪೦) ಹಾರ್‍ವರ ಮನೆಯು ಬೋನಗಿತ್ತಿಗೆ ನೀರೇ ದಿಬ್ಬಣಂತ.

೪೧) ಹಾದಿ ಹೋಗವರ ಎಪ್ಪಾ ಅಂದರ ಯಾರಿಗೆ ಹುಟ್ಟೀದಿ ಮಗಾ ಅಂದ್ನಂತ.

೪೨) ಹಾದರಗಿತ್ತಿ ಕೈ ಹಂದರದಾಗ, ಗರತಿ ಕೈ ಒಲ್ಯಾಗ.

೪೩) ಹಾದರದವಳನ್ನ ಹಂದರದಾಗ ಕರದರಂತ ಗರತಿನ್ನ ಗಂಗಾಳ ಬೆಳಗಾಕ ಹಚ್ಚಿದರಂತ.

೪೪) ಹೊರಕಡಿಗೆ ಹೋದಲ್ಲೇ ತಂಬಗಿ ಮರತ ಬರಾಂವ.

೪೫) ಹತ್ತಿದ್ದಲ್ಲ ಹೊಂದಿದ್ದಲ್ಲ, ಹತ್ತಿಕಟಿಗಿ ತೊಗೊಂಡ ಅಲಾಯಿ ಆಡಿದ್ರಂತ.

೪೬) ಸಣ್ಣ ಹುಡಗರ ಗೆಳೆತನ ಮಾಡಬಾರ್ದು ಸಣ್ಣ ಕಲ್ಲೀಲೆ ಕುಂಡಿ ಒರಸ್ಕೋಬಾರದು.

೪೭) ಸಿರಿಗೇಡಿಗೆ ಸೀರಿ ಉಡಸಿದ್ರ, ಕೆರಿ ದಂಡಿಮ್ಯಾಗ ನಿಂತ ಕ್ಯಾಕಿ ಹೊಡಿತಿತ್ತಂತ.

೪೮) ಬ್ಯಾಸೊತ್ತು ಸೊಸಿ ಬ್ಯಾರಾದ್ರ, ಅತ್ತಿ ಆಕೆ ಪಾಲಿಗೆ ಬಂದಳಂತ.

೪೯) ಬಿಟ್ಟಿ ಹೆಣ್ಣು ಸಿಕ್ಕರ ನನಗೊಂದು—ನಮ್ಮಪ್ಪ ಗೊಂದು, ರೊಕ್ಕಾ ಕೊಡೋದಾದ್ರೆ ನಾ ಸಣ್ಣವ- ನಮ್ಮಪ್ಪ ಮುದಕ.

೫೦) ತಂದರೆ ಬಂದರೆ ತನ್ನ ಗಂಡ, ತರದೆ ಬಂದ್ರೆ ತನ್ನ ತಂಗಿ ಗಂಡ.

೫೧) ದಂಡ ಕೊಡು ಮಗ ಇದ್ದರೂ, ಕುಂಡಿ ಕೊಡೋ ಮಗ ಇರಬಾರದು.

೫೨) ಮಳಿಗಾಲದಾಗ ಮನಿ ನೋಡಬಾರದು, ಚಳಿ ಗಾಲದಾಗ ಹೆಣ್ಣ ನೋಡಬಾರದು.

೫೩) ಮುನ್ನಡೆ ಮುಕಳಿ ತೊಕ್ಕೊ ಅಂದ್ರ, ಮುಂದ ಜೋತಾಡುದೇನು ಅಂದ್ರಂತ.

೫೪) ಮಾರೆಮ್ಮಗ ಗಂಡನಿಲ್ಲ, ಬೀರದೇವರಿಗೆ ಹೆಂಡ್ತಿ ಯಿಲ್ಲ.

೫೫) ಮುರಕಿಲ್ಲದ ಹೆಂಗಸಿಲ್ಲ, ಸುರಕಿಲ್ಲದ ಊಟ ಅಲ್ಲ.

೫೬) ಮೇಲಿನ ಮೋಡಾ ನೋಡಿ ಒರತ್ಯಾಗ ಉಚ್ಚಿ ಹೊಯ್ದ ಹಾಗೆ.

೫೭) ಉದ್ಯೋಗವಿಲ್ಲದ ಬಡಗ್ಯಾ ಮಗನ ಮುಕಳಿ ಕೆತ್ತಿದ್ನಂತ.

೫೮) ಸರಿಕದವರು ಸರಗಿ ಹಾಕ್ಕೊಂಡ್ರ, ನೆರೆಮನಿ ಯಾಕಿ ಉರಲು ಹಾಕ್ಕೊಂಡ್ಲಂತ.

ಈ ಮೇಲಿನ ಹಲವಾರು ಗಾದೆ ಮಾತುಗಳಲ್ಲಿ ಅಲ್ಲಲ್ಲಿ ಹಲವು ಅಶ್ಲೀಲ ಶಬ್ದಗಳು ಬಂದಿದ್ದರೂ, ಅವುಗಳಿಗೆ ವಿಶಿಷ್ಟ ಅರ್ಥ ಇದೆ.

ಇನ್ನು ಈ ಗಾದೆ ಮಾತುಗಳಂತೆ ಜನಪ್ರಿಯವಾಗಿದ್ದರೂ, ಇವುಗಳಷ್ಟು ಆಮೂಲಾಗ್ರ ವಿಷಯವಿಸ್ತಾರವನ್ನು ಹೊಂದದವವು

ಗಳೆಂದರೆ 'ಒಗಟು' ಗಳು. ಆದರೆ ಗಾದೆ ಮಾತುಗಳಷ್ಟೇ ಜನಪ್ರಿಯತೆಯನ್ನು ಕಾಯ್ದುಕೊಂಡು ಬಂದಂತಹ ಒಗಟುಗಳು ಜನಪದ ಸಾಹಿತ್ಯದಲ್ಲಿ ಇತ್ತೀಚಿಗೆ ವಿಶೇಷ ಸ್ಥಾನ ಪಡೆದಿವೆ. ಅವುಗಳನ್ನಷ್ಟು ನೋಡೋಣ.

೫. ಜನಪದ ಒಗಟುಗಳಲ್ಲಿ ಹಾಸ್ಯ

ವೈನೋದಿಕ ಒಗಟುಗಳು ಇತ್ತೀಚೆಗೆ ಬಹು ಜನಪ್ರಿಯತೆಯನ್ನು ಪಡೆದಿವೆ. ಕೇವಲ ಹೋತ್ತುಹೋಗದ ಪುಂಡರಾಲಿಪ ತರ್ಕ ವಿನೋದವಾಗಿರದೇ, ಬುದ್ಧಿಗೆ ಕಸರತ್ತನ್ನು, ಮೆದುಳಿಗೆ ಸರ್ಕಸ್‌ನ್ನು ಮಾಡಲ್ಪಚ್ಚಿಸುವ ಒಗಟುಗಳೆಷ್ಟೋ ಇವೆ. ಹಳ್ಳಿಗಳಲ್ಲಿ ಕಗ್ಗಂಟಿನಂತಹ ಒಗಟುಗಳನ್ನು ನಾನು ಜಾಣನೆಂದು ದಿಮಾಕ ಮಾಡಿ ಮೆರೆಯುವವರಿಗೆ ಸವಾಲೊಡ್ಡಿ ಜವಾಬಿಗಾಗಿ ತರುಬಿ ನಿಲ್ಲುಸುತ್ತಿದ್ದರು. ಒಗಟು ಹಾಗೂ ಹಾಡುಗಳ ಬಗ್ಗೆ ಪೈಪೋಟಿಯೇ ನಡೆಯುತ್ತಿತ್ತು. ಆದರೆ ಈಗಿಲ್ಲ. ಒಗಟುಗಳನ್ನು ಹಾಡಿನ ರೂಪದಲ್ಲಿಯೇ ಪ್ರಶ್ನೋತ್ತರಗಳನ್ನು ನಡೆಸುತ್ತಿದ್ದರು. "ಓದ ಬಲ್ಲವರು ಒಡದ್ಹೇಳಿರೋ..." ಎಂದು ಸಾರ್ವತ್ರಿಕವಾಗಿಯೇ ಜಾಲ ಬೀಸುತ್ತಿದ್ದರು.

ಬೆಟ್ಟದ ಮೇಗಣ ಹೆಣ್ಣು
ಅವಳುಟ್ಟಿರೋದು ಕಾಗಿನಬಣ್ಣ
ಅವರ ನೆರಿಯಲ್ಲಿ ಅರವತ್ತು ಕಣ್ಣು
ಅದನ್ನು ಎಣಿಸಿದವರಿಗೆ ಸಾವಿರ ಹೊನ್ನು ॥ (ನವಿಲು)

ಬಿಡಿಸಿ ಹೇಳಿದವರಿಗೆ ಇಂತಿಷ್ಟು ಬಹುಮಾನವೆಂದೇ ಅವರ ಘೋಷಣೆ. ಹೀಗೆ ಕೇವಲ ಮನೋರಂಜನೆಯೋ ಒಗಟು ಗಳಿಗೆ ಪ್ರಧಾನವಾಗಿರದೇ ಪಾಂಡಿತ್ಯ-ತರ್ಕ-ಆಲೋಚನೆ ಮತ್ತು ಬುದ್ಧಿಬಲಗಳೂ ಒಗಟುಗಳಲ್ಲಿ ಪ್ರಾಧಾನ್ಯತೆ ಪಡೆಯುತ್ತವೆ. ನಾನಿಲ್ಲಿ ಹಾಸ್ಯದ ಒಗಟುಗಳ ಕೆಲವು ನಮೂನೆಗಳನ್ನು ಕೊಟ್ಟಿದ್ದೇನೆ. ಈ ಒಗಟುಗಳು ನಾನು ಅಲ್ಲಲ್ಲಿ ಓದಿದ್ದು, ಕೇಳಿದ್ದವುಗಳಾಗಿರುತ್ತವೆ.

೧) ಅವ್ವ ಕೈಯೆತ್ತಿ ಹಾಕೋದು
ಅಪ್ಪ ಕಾಲೆತ್ತಿ ಹಾಕೋದು (ರವಿಕೆ-ಪ್ಯಾಂಟು)

೨) ರಾಯರು ಬಂದರು, ಕೋಟು-ಪ್ಯಾಂಟು
ಬಿಚ್ಚಿದರು ಬಾವಿಯೊಳಗೆ ಬಿದ್ದರು.
(ಬಾಳೆಹಣ್ಣು)

೩) ವ್ಯಾಪಾರ-ಸಾಪಾರ ಯಾವಾಗ
ಎದುರು-ಬದರಿಗೆ ಕುಳಿತಾಗ
ಅಳೋದು ಕರೆಯೋದು ಯಾವಾಗ
ಅರ್ಧ ಒಳಗ ಹೋದಾಗ
ನಗೋದು-ನಲಿಯೋದು ಯಾವಾಗ
ಪೂರ್ತಿ ಒಳಕ್ಕೆ ಹೋದಾಗ
(ಬಳೆ ಇಡಿಸಿಕೊಳ್ಳುವದು)

೪) ಹಬ್ಬಕ್ಕೆ ಬಂದ ಸುಬ್ಬಲಗಾಟಿ
ಕೆಚ್ಚಿದರೆ ಉಚ್ಚೆ ಹುಯ್ಕೋತಾಳೆ
(ತೆಂಗಿನಕಾಯಿ)

೫) ಹಮಾರೆ ತೋಟದಲ್ಲಿ
ತುಮಾರೆ ಮರ ಹುಟ್ಟಿ
ಅಪ್ಪ ಹಾಯ್. ಅಮ್ಮ ಹಾಯ್
(ಮೆಣಸಿನಕಾಯಿ)

೬) ಹತ್ತುವವರು ಇಬ್ಬರು
ಕೆಡುಗುವವರು ಹತ್ತುಜನ
ತಿಂದವರು ಮೂವತ್ತೆರಡು ಜನ
ರುಚಿ ನೋಡಿದವ ಮಾತ್ರ ಒಬ್ಬವ
(ಕಾಲು-ಬೆರಳು-ಹಲ್ಲು-ನಾಲಗೆ)

೭) ನಗೆ ಬಂದು ನಾಕು ತಿಂಗಳಾಯಿತು
ನಗಬೇಕೆಂದರೆ ಪಂಚಕ ಬಿದ್ದಿದೆ
ಅವ್ವಾಗ ಬಂದು ನೋಡಿ ಹೋಗನ್ನು
ಅಪ್ಪಗ ಬಂದು ಕರಕೊಂಡ ಹೋಗನ್ನು
(ಹತ್ತಿಹೊಲಾ)

೮) ಬಾಯಾಗ ಹಲ್ಲಿಲ್ಲ । ಎದಿವ್ಯಾಗ ಮೊಲೆಯಿಲ್ಲ ।
ಮಕ್ಕಳ ಹಡೆದಾಳ ಮನಿತುಂಬ । ಆ ತಾಯಿ
ತಿಪ್ಪಿ ಕೆದರೂತ ಹೋಗ್ಯಾಳ (ಕೋಳಿ)

೯) ಬೊಂಬಾಯಿ ಮೋಟಾರು । ನಾಲ್ಕು ಜನ
ಡ್ರೈವರು ಮೇಲೊಬ್ಬ ಪ್ರಯಾಣಿಕ । (ಹೆಣ)

ಹೀಗೆ ಒಗಟುಗಳು ಮೇಲ್ನೋಟಕ್ಕೆ ಒಂದು ತೆರನಾಗಿ ಕಂಡರೂ ಒಳನೋಟಕ್ಕೆ ಅದರ ಪರಿಯೇ ಬೇರೆಯಾಗಿರುತ್ತದೆ. ಒಡ ದ್ಹೇಳಿದಾಗ 'ಓ, ಇದSS ಹೌದ ನೋಡ' ಎಂದು ಸಮಾ

ಧಾನ ಹಾಗೂ ತೃಪ್ತಿ. ಜನಪದ ಒಗಟುಗಳು ಸಾರ್ವತ್ರಿಕ ವಾಗಿದ್ದರೂ ಆಯಾ ಭಾಗದ ವೈಯಕ್ತಿಕ ಮತ ಧರ್ಮಗಳ ಕಟ್ಟುಪಾಡಿಗೆ ಬಿದ್ದುಕೊಂಡಿದ್ದರಿಂದ ಇವುಗಳ ಕ್ಷೇತ್ರ ಹೇಳಿ ಕೊಳ್ಳುವಷ್ಟು ವಿಸ್ತಾರವಾಗಿಲ್ಲ. ಅಂದರೆ ಇವು ತಮ್ಮದೇ ಆದ ಒಂದು ಪರಿಮಿತ ಹರವಿನಲ್ಲಿವೆ.

ಸಣ್ಣ-ಸಣ್ಣ ಮಕ್ಕಳು ತಮ್ಮ ಮನೆಯಂಗಳದಲ್ಲೂ. ಶಾಲೆಯ ಅಂಗಳದಲ್ಲೂ ಆಡುವಾಗ ಒಮ್ಮೊಮ್ಮೆ ತಮ್ಮೆರಡೂ ಹಸ್ತದಿಂದ ನೆಲಕ್ಕೆ ಚಪ್ಪರಿಸುತ್ತ, ಕಪ್ಪೆಜಿಗಿತ ಜಿಗಿಯುತ್ತ ಅನ್ನುವ (ಹೇಳುವ) ಚುಟುಕುಗಳಿಗೆ ಒಗಟಿದ ಹಾಡೆಂತಲೂ ಹೇಳುತ್ತಾರೆ. ಅವುಗಳನ್ನು ಕೇಳಿದಾಗ ನಗೆ ಬಾರದಿರದು.

೧) ಮಾಳಿಗಿ ಮ್ಯಾಗ ಹಪ್ಪಳ
ಗಂಡ-ಹೇನ್ತಿ ಸಪ್ಪಳ

೨) ತುಪ್ಪದಾಗ ಕಡ್ಡಿ
ನಿಮ್ಮವ್ವ ಕುಡ್ಡಿ

೩) ಹಂದರದಾಗ ನಮ್ಮಣ್ಣಾ
ಹಂದಿ ಕಾಯಾವ ನಿಮ್ಮಣ್ಣಾ

೪) ದೊನ್ನಿಕಾಟಾ-ದೊನ್ನಿಕಾಟಾ ದೂರ ಹೋಯ್ತು
ಅಕ್ಕನ ದ್ವಾಸಿ ಕಟ್ಟೋಯ್ತು
ಮಾವನ ಮೀಸಿ ಸುಟ್ಟೋಯ್ತು
ಬರೋಬ್ಬರಿ ಸಾಬನ ಮುಕಳಿ-ಇಲಿಮರಿ

೫) ಮಾಳಿಗಿ ಮ್ಯಾಗ ಹಪ್ಪಳ
ಮಾವನ ಮುಕಳಿ ಸಪ್ಪಳ

೬) ಹಗೇದಾಗ ಹಾವು
ಬಡಿಬ್ಯಾಡ ಮಾವಾ

೭) ಚೊಣ್ಣದಾಗ ಚೇಳು
ಲಿಂಬಿಯು ಹೋಳು

೮) ಅಂಗಡ್ಯಾಗ ಕಸಕಸಿ । ಗಂಡ-ಹೆಣ್ತಿ ಮುಸಿ-ಮುಸಿ

೯) ಆಡಕಲಗಡಿಗ್ಯಾಗ ಆಡೂನ ಬಾ
ನಿಬ್ಬಣ ಬಂದೈತಿ ನೋಡೂನ ಬಾ

೧೦) ಅಲಾಯ್-ಬಲಾಯ್ ಆಡೂನ ಬಾ
ಅಮ್ಮನ ಕುಲಾಯಿ ಜಗ್ಗೂನ ಬಾ

೧೧) ಕಾಗಿ-ಕಾಗಿ ಕಾವ್
ಯಾರ ಬರ್‍ತಾರವ್
ಮಾವ ಬರ್‍ತಾನವ್ವ
ಮಾವ್ಗೇನ ಊಟ
ಬೀಸೂಕಲ್ಲಗೂಟ ॥

೧೨) ಈಬತ್ತಿ ಪಟ್ಟಾ । ಬಂಕಣದಾಗ ಚುಟ್ಟಾ ॥

೧೩) ಪಾಟಿ ಮ್ಯಾಲೆ ಪಾಟಿ । ನಮ್ಮ ಸಾಲಿ ಸೂಟಿ ॥

೧೪) ಮಾವಾ-ಮಾವಾ ಮಾತಾಡು ।
ಮಾವಿನ ಗಿಡಕೆ ಜೋತಾಡು ॥

೧೫) ಮಾವಾ ಬಂದಾನವ್ವ
ಏನೇನ ತಂದಾನವ್ವ

ಏನೂ ತಂದಿಲ್ಲವ್ವ
ಹಂಡೆದಂಥಾ ಕುಂಡಿ ಬಿಟಗೊಂಡ
ಹಂಗ ಬಂದಾನವ್ವ ॥

೬. ಹಳ್ಳಿಗರ ಮೋಜಿನ ಗಣಿತ (ಸಮಸ್ಯೆಗಳು)

ಜನಪದ ಸಾಹಿತ್ಯದಲ್ಲಿ ಮೋಜಿನ ಗಣಿತವೆಂದರೆ ಸಮಸ್ಯಾತ್ಮಕವಾದ, ಅಡ್ಡಗೋಡೆಯ ಮೇಲೆ ದೀಪವಿಟ್ಟಂತಿರುವ ಹಲವು ಸಮಸ್ಯೆಗಳು. ಇವುಗಳಿಗೆ ಒಮ್ಮೊಮ್ಮೆ ಖಚಿತ ಉತ್ತರ ಸಿಗಲಾರದು. ಅಂತೆಯೇ ಹಳ್ಳಿಯಲ್ಲಿ ವಿದ್ಯೆಯಿಲ್ಲದ ಹಲವರು ಬುದ್ಧಿವಂತರಾದವರನ್ನೂ ಸಹ ಇಂಥ ಲೆಕ್ಕದ ರೂಪದಂತಿರುವ ಸಮಸ್ಯೆ ಹೇಳಿ ನಿಖರ ಉತ್ತರ ಹೇಳಲು ಸವಾಲೊಡ್ಡುತ್ತಾರೆ. ಇಂಥವುಗಳಿಗೆ ಶಾಲೆ-ಕಾಲೇಜುಗಳಲ್ಲಿ ಕಲಿತ ಗಣಿತವೂ ಊರುಗೋಲಾಗದೇ ವ್ಯವಹಾರಜ್ಞಾನವೇ ದೀಪಸ್ತಂಭವಾಗುತ್ತದೆ. ಕಲಿತವರು ಉತ್ತರ ಹುಡುಕಲು ತಮ್ಮ ಕೈಬೆರಳು ಮಡಚುತ್ತ ಕುಳಿತದ್ದಾದರೆ ಅವರೆದುರಿಗೆ ಹಾಸ್ಯಾಸ್ಪದಕ್ಕೆ ಗುರಿಯಾಗುತ್ತಾರೆ. ಉದಾಹರಣೆಗೆ—

೧) ಒಂದಂಕಣ ಮನೆ ಕಟ್ಟಲು ನಾಲ್ಕು ಕಂಬಗಳು ಬೇಕು, ಹಾಗಾದರೆ ಐದು ಅಂಕಣ ಮನೆಗೆ ಕಂಬಗಳೆಷ್ಟು? ಎಂದಾಗ ಪುಸ್ತಕದಲ್ಲಿನ ಲೆಕ್ಕಾ ಕಲಿತವರು ಲೆಕ್ಕಾಚಾರ ಮಾಡಿ ಇದೇನ ಮಹಾ! ಇಪ್ಪತ್ತು ಕಂಬವೆಂದು ಹೇಳಿದರೆ ಅವರು ಗೇಲಿ ಮಾಡಿ ನಕ್ಕು "ತಮ್ಮಾ ನಿನಗ ಸಾಲಿ-ಗಿಲಿ ಬೇಡ,

ಕಂಬಾರ ಸಾಲಿಗೆರ, ಕುಂಬಾರ ಸಾಲಿಗೆರ ಹೋಗೆಂದು" ಸುಮಾರು ಮಾಡುತ್ತಾರೆ. ಯಾಕೆಂದರೆ ಐದು ಅಂಕಣ ಮನೆಗೆ ಹನ್ನೆರಡು ಕಂಬಗಳು ಬೇಕು.

೨) ಇದೇ ರೀತಿಯಾಗಿ ಒಂದು ಒಲೆ ಹೂಡಲು ಮೂರು ಕಲ್ಲುಬೇಕು ಹಾಗಾದರೆ ನಾಲ್ಕು ಒಲೆ ಹೂಡಲು ಎಷ್ಟು ? ಎಂದಾಗ ಪ್ರತ್ಯಕ್ಷ ವ್ಯವಹಾರಜ್ಞಾನ ಇಲ್ಲದವರು ಹನ್ನೆರಡೆಂದು ಹೇಳುವ ಸಂಭವ ಹೆಚ್ಚು. ಅವುಗಳಿಗೆ ಒಂಬತ್ತಾದರೆ ಸಾಕು. ಒಂದು ವೇಳೆ ನೀವು ಒಂಬತ್ತೆಂದು ಹೇಳಿವರೆ ಅದ್ಹೇಗೆ ಬೇರೆ-ಬೇರೆ ಒಲಿ ಹಾಕಿ ತೋರಿಸೆನ್ನುತ್ತಾರೆ. ಅಂಥಲ್ಲಿ ಹನ್ನೆರಡೇ ಕಲ್ಲು ಬೇಕು. ಸಟ್ಟನೇ ಹನ್ನೆರಡೆಂದರೆ ನಾಲ್ಕು ಕೂಡುಒಲೆ ಹಾಕಿ ಒಂಬತ್ತೆಂದು ಹೇಳಿ ಅಪಹಾಸ್ಯ ಮಾಡುವದುಂಟು.

೩) " ಹೊಳಿಯಾಗ ಏಳೆಮ್ಮೆ, ದಂಡಿಮ್ಯಾಗ ಹತ್ತೆಮ್ಮಿ, ಮನ್ಯಾಗ ಹಿಂಡೆಮ್ಮಿ ಒಟ್ಟು ಎಷ್ಟು ಎಮ್ಮಿ ಆದವು ?" ಹೇಳೆನ್ನುತ್ತಾರೆ. (ಉತ್ತರ–ಒಂದೇ ಎಮ್ಮಿ).

೪) ಹಲವು ಪ್ರಸಂಗಗಳಲ್ಲಿ ಸಂತೆ-ಪೇಟೆಗಳಲ್ಲಿ ವ್ಯವಹರಿಸುವಾಗ ಕೊಡು-ತಗೊಳ್ಳುವವರಿಬ್ಬರೂ ಬೇಸ್ತು ಬೀಳುವದುಂಟು. ಉದಾಹರಣೆಗೆ ಈ ಪ್ರಸಂಗವನ್ನು ನೋಡಬಹುದು.

ಸಂತೆಯಲ್ಲಿ ಹೀರೆಕಾಯಿ ಮಾರುವವಳಲ್ಲಿಗೆ ಕಲಿತವನೊಬ್ಬ ಹೋಗಿ "ಹ್ಯಾಗಮ್ಮಾ ಇವು ?" ಎಂದಾಗ ಆಕೆ ಪಾವಲಿಗೆ (ನಾಲ್ಕಾಣೆ) ಅಥವಾ (೨೫ ಪೈಸೆ) ೫ ಎಂದಳು.

"ಬಹಳ ಹೆಚ್ಚಾಯ್ತು ಆಣೆಕೊಂದು ಮಾಡಿಕೊಡು" ಎಂದು ಕಲಿತವ ಪೀಡಿಸಿ ಕೇಳಿದಾಗ ಅವಳು "ಬರೋದಿಲ್ಲರಿ ಸಾಹೇಬ್ರ ನಾನೂ ಅತ್ತಿಮನಿ ಸೊಸಿ, ಹೋಗಿ ಲೆಕ್ಕಾ ಒಪ್ಪಸಬೇಕ್ರಿ. ನಮ್ಮತ್ತಿ ಕನಿಷ್ಟ ಚವಲಕ್ಕ (೨ ಆಣೆ; ೧೨ ಪೈಸೆ) ಮೂರಾಂಗ ಮಾರಕೊಂಡ ಬಾ ಅಂದಾಳ್ರಿ. ಹಾಗಾದ್ರ ತಗೊಳ್ಳರಿ" ಎಂದಾಗ ಕಲಿತ ಸಾಹೇಬ್ರು "ಬೇಡ ಬಿಡು ಬರ-ಬರತ ಹೆಚ್ಚಿಗೆ ಹೇಳಾಕ ಹತ್ತಿದಿ, ನಿನ್ನ ರೇಟು ಕುತಗಿಮಟ, ಅದ ರಾಗ ನಿಮ್ಮತ್ತಿ ಹೇಳಿದ್ದು ಎತಗೈಮಟ" ಎಂದು ಗೊಣಗುತ್ತ ಹೀರೆಕಾಯಿ ಹುಡುಕುತ್ತ ಮುಂದೆ ಸಾಗಿದರು ಸಾಹೇಬ್ರು !!

೫. ಮೂವರು ಸಹೋದರರು (ಸಂಗ್ರಹ)

ಒಂದು ಹಳ್ಳಿ. ಮೂವರು ಸಹೋದರರು. ಅವರಿಗೆ ಒಬ್ಬ ಅಕ್ಕ. ಆಕೆಗೆ ಒಬ್ಬ ಚೆಲುವೆ ಮಗಳಿದ್ದಳು, ಅಕ್ಕನ ಮಗಳನ್ನು ಲಗ್ನ ಮಾಡಿಕೊಳ್ಳಲು ಈ ಮೂವರಲ್ಲಿಯೂ ಮೇಲಾಟ. ಆದ್ದರಿಂದ ಅಕ್ಕ ತನ್ನ ಮಗಳನ್ನು ಯಾವ ತಮ್ಮನಿಗೆ ಕೊಡಬೇಕೆಂಬ ಯೋಚನೆಯಲ್ಲಿಯೇ ಚಿಂತೆಗಿಡಾಗಿದ್ದಳು. ಅಂತೂ ಕೊನೆಗೆ ಆ ಮೂವರನ್ನೂ ಒತ್ತಟ್ಟಿಗೆ ಕರೆದು ಪ್ರತಿಯೊಬ್ಬರಿಗೂ ಮೂರುನೂರು ರೂಪಾಯಿ ಕೊಟ್ಟು, ನೀವು ಈ ಹಣದಲ್ಲಿ ಯಾರು ಅತಿ ಹೆಚ್ಚು ಉಪಯುಕ್ತ ವಸ್ತುವನ್ನು ತರುತ್ತಿರೋ ಅವರಿಗೆ ಮಗಳನ್ನು ಕೊಡುವೆ ಎಂದಳು.

ಮೂವರೂ ಆನಂದದಿಂದ ಅದೇ ದಿನವೇ ಮೈಸೂರ ಜಾತ್ರೆಗೆ ನಡೆದರು. ಮೊದಲನೆಯವನು ಒಂದು ಕನ್ನಡಿ

ಖರೀದಿಸಿದ. ಅದು ಹೀಗಿತ್ತಲ್ಲ, ಎಲ್ಲಿಯೋ ಇರಲಿ, ಯಾರು-ಯಾರನ್ನು ನೋಡಬೇಕೆಂದು ಮನಸ್ಸು ಮಾಡುವರೋ ಅವ ರೆಲ್ಲರೂ ಆ ಕನ್ನಡಿಯಲ್ಲಿ ಕಾಣಿಸುತ್ತಿದ್ದರು.

ಎರಡನೆಯವ ಒಂದು ತೊಟ್ಟಿಲು ಕೊಂಡ. ಅದರಲ್ಲಿ ಕುಳಿತರೆ ಸಾಕು ಕ್ಷಣಾರ್ಧದಲ್ಲಿ ಇಚ್ಛಿತ ಸ್ಥಳಕ್ಕೆ ಹೋಗಿ ತಲುಪಿಸುತ್ತಿತ್ತು.

ಮೂರನೆಯವ ಒಂದು ಗೊಂಬೆ ಖರೀದಿಸಿದ. ಆ ಗೊಂಬೆಯನ್ನು ಸತ್ತವರಿಗೆ ಸ್ಪರ್ಶಮಾಡಿದರೆ ಎದ್ದು ಕುಳಿತು ಕೊಳ್ಳುತ್ತಿದ್ದರು.—ಅಂತೂ ಮೂವರೂ ತಮ್ಮ ತಮ್ಮ ವಸ್ತು ಗಳನ್ನು ಬಹು ಜೋಪಾನವಾಗಿಟ್ಟುಕೊಂಡು ಹೆಮ್ಮೆ ಪಡುತ್ತ ಊರಿಗೆ ತಿರುಗಿ ಬರುತ್ತಿದ್ದರು.

ಹಸಿವೆಯಾಗಿದ್ದರಿಂದ ಮೂವರೂ ಹಳ್ಳದ ದಂಡೆಯ ಮೇಲೆ ಕುಳಿತು ಬುತ್ತಿ ಬಿಚ್ಚಿಕೊಂಡು ಊಟ ಮಾಡಿದರು, ಎಲೆ-ಅಡಿಕೆ ಹಾಕಿಕೊಂಡರು.

ಮೊದಲನೆಯವ ತನ್ನ ವೀಳ್ಯದ ಬಾಯ್ಗೆಂಪು ನೋಡಲು ತಾನು ಖರೀದಿಸಿದ ಕನ್ನಡಿಯನ್ನು ಹೊರದೆಗೆದು ನೋಡಿ ಕೊಂಡ. ಹಾಗೆಯೇ ತನ್ನ ಅಕ್ಕನ ಚಲುವೆ ಮಗಳನ್ನು ನೋಡಲು ಬಯಸಿದನು. ಚಿಟ್ಟನೇ ಚೀರಿಬಿಟ್ಟ ! ಯಾಕೆಂದರೆ ಅವಳು ಸತ್ತಿದ್ದರಿಂದ ಸಿದಿಗೆ ಕಟ್ಟಿ ಅವಳ ಆ ಹೆಣವನ್ನು ಚಟ್ಟದ ಮೇಲಿಟ್ಟು ಒಯ್ಯುವ ಸಿದ್ಧತೆ ನಡೆದಿತ್ತು. ಈತ ಚೀರಿ ಅಳಲು ಪ್ರಾರಂಭಿಸಿದ್ದನ್ನು ಕಂಡು ಇನ್ನುಳಿದ ಇಬ್ಬರು ವಿಚಾರಿಸಲು ತಾನು ಕಂಡಂತಹದನ್ನು ವಿವರಿಸಿದ. ಆಗ

ಎರಡನೆಯವನು 'ನಾವೆಲ್ಲರೂ ಆ ಅಂತ್ಯಸಂಸ್ಕಾರಕ್ಕೆ ಹೋಗಲೇಬೇಕು. ಇಕೋ ನನ್ನ ಈ ತೊಟ್ಟಿಲು ಸಾಮಾನ್ಯವಲ್ಲ. ಇದರಲ್ಲಿ ಕುಳಿತುಕೊಳ್ಳಿರಿ, ಇಚ್ಛಿಸಿದಲ್ಲಿ ಹೋಗಿಳಿಸುತ್ತದೆ.' ಇಷ್ಟು ಹೇಳಿದ್ದೇ ತಡ, ಮೂವರೂ ಕುಳಿತು ತನ್ನ ಅಕ್ಕನ ಮನೆಯಂಗಳದಲ್ಲಿಳಿದರು. ಜನರೆಲ್ಲ ಗಾಬರಿಗೊಂಡರು. ಯಾಕೆಂದರೆ ಮೈಸೂರ ಜಾತ್ರೆಗೆ ಹೋದವರು ಇಷ್ಟು ಬೇಗ ಅದು ಹೇಗೆ ಬಂದರೆಂದು !

ಮೂರನೆಯವನು ಚಟ್ಟದ (ಸಿದಿಗೆ) ಮೇಲಿದ್ದ ತನ್ನ ಅಕ್ಕನ ಮಗಳ ಆ ಹೆಣಕ್ಕೆ ತಾನು ಕೊಂಡು ತಂದಂತಹ ಗೊಂಬೆಯನ್ನು ಸ್ಪರ್ಶ ಮಾಡಲು ಅವಳು ಎಚ್ಚೆತ್ತು ಕುಳಿತಳು. ಹೇಳಿರೀಗ ಅಕ್ಕ ತನ್ನ ಚೆಲುವೆ ಮಗಳನ್ನು ಈಗ ಯಾರಿಗೆ ಕೊಡಬೇಕು?

ಮೂವರೂ ತಮ್ಮ ತಮ್ಮ ಕಾರ್ಯವೇ ಮಿಗಿಲೆಂದು ಪರಸ್ಪರ ವಾದ–ವಿವಾದ. ಕನ್ನಡಿಯಲ್ಲಿ ನೋಡಿ ಅಕ್ಕನ ಮಗಳು ಸತ್ತಿದ್ದನ್ನು ಹೇಳದಿದ್ದಲ್ಲಿ ನೀವೇನು ಮಾಡುತ್ತಿದ್ದಿರಿ? ಎನ್ನುತ್ತಾನೆ ಮೊದಲನೆಯವ. ಅದೇ ಪ್ರಕಾರ ಎರಡನೆಯವನೂ ಸಹ ಅಷ್ಟೇ ಏರು ಧ್ವನಿಯಲ್ಲಿ ಹೌದಪೌ ನಾನು ನನ್ನ ತೊಟ್ಟಿಲದಾಗ ನಿಮ್ಮನ್ನೆಲ್ಲಾ ಕೂಡ್ರಿಸಿಕೊಂಡು ಮಿಸುಗಿ ಮಾತನಾಡುವಷ್ಟರಲ್ಲಿ ಈ ಅಂಗಳದಾಗ ತಂದು ಇಳಸದಿದ್ದರ ನೀವೇನು ಮಾಡ್ತಿದ್ದಿರಿ? ಹೆಣಾ ಹೂತು ಕೊಳೆತು ಹೋಗ್ತಿತ್ತು ಎಂದು ವಾದಿಸಿದ. ಮೂರನೆಯವನು ನಾನು ನನ್ನ ಗೊಂಬೆಯಿಂದಲೇ ಬದುಕಿಸಿದ್ದೇನೆ. ನಾನೇ ಅವಳನ್ನು ಲಗ್ನವಾಗುತ್ತೇನೆಂದ.

ವಿಚಾರಿಸಿರಿ. ಈ ಸಮಸ್ಯೆಯನ್ನು ಹಳ್ಳಿಯ ಜನರು ಇಂಥ ಹತ್ತಿಪ್ಪತ್ತು ಸಮಸ್ಯೆಗಳನ್ನು ಹೇಳಿ ಎಂಥವರ ಮೆದುಳಿಗೂ ಆಹಾರವನ್ನೊದಗಿಸಬಲ್ಲರು.

೭. ಸಮಸ್ಯೆಯ ಕತೆ (ಸಂಗ್ರಹ)

ಒಂದೂರು. ಒಬ್ಬ ಬಡಗ ಹಾಗೂ ಅಕ್ಕಸಾಲಿಗ ಇಬ್ಬರೂ ತಾವು ಇದ್ದ ಹಳ್ಳಿಯಲ್ಲಿ ಹೊಟ್ಟೆ ತುಂಬುವುದಿಲ್ಲ ವೆಂದು ಪರರಾಜ್ಯಕ್ಕೆ ನಡೆದರು. ಬಡಗಿಯು ಉಳಿ, ಬಾಚಿ, ಉಚಗೊಡ್ಡ, ಗರಗಸ ಮುಂತಾದವುಗಳನ್ನು ತೆಗೆದುಕೊಂಡು ನಡೆದ. ಅದೇ ರೀತಿ ಅಕ್ಕಸಾಲಿಗನು ಅಗ್ಗಿಷ್ಟಿಗೆ, ಇಕ್ಕಳ, ಅಳಿದುಳಿದ ಅಲ್ಪ ಸ್ವಲ್ಪ ಬಂಗಾರ ಮುಂತಾಗಿ ತೆಗೆದು ಕೊಂಡು ಪರಸ್ಪರ ಮಾತನಾಡುತ್ತ ನಡೆದರು. ನಡುದಾರಿಯಲ್ಲಿ ಇವರಿಗೊಬ್ಬ ಬ್ರಾಹ್ಮಣ ಭೆಟ್ಟಿಯಾದ. ಆತ ಕಾಶಿಯಲ್ಲಿ ವೇದ ಶಾಸ್ತ್ರ ಅಭ್ಯಾಸ ಮಾಡಿ ತನ್ನೂರಿಗೆ ಹಿಂದಿರುಗುತ್ತಿದ್ದ. ಬ್ರಾಹ್ಮಣ ಇವರಿಗೆ ಭೆಟ್ಟಿಯಾದಾಗ ಸೂರ್ಯಾಸ್ತದ ಸಮಯ ವಾಗಿದ್ದರಿಂದ ಬ್ರಾಹ್ಮಣನು ತನ್ನ ಪರಿಚಯವನ್ನು ಅವರಿಗೆ ಹೇಳಿ, 'ಇದು ಕಾಡಿನ ಮಧ್ಯ ದಾರಿ ಇರುತ್ತದೆ. ಕಾರಣ ಈ ಹೊತ್ತು ಇಲ್ಲಿಯೇ ವಸತಿ ಹಾಕೋಣ' ವೆಂದು ಹೇಳಿದ್ದ ರಿಂದ ಮೂವರು ಅಲ್ಲಿಯೇ ಮಲಗಿಕೊಂಡರು.

ಅಲ್ಲಿ ಕಾಡು ಪ್ರಾಣಿಗಳ ಭಯವಿದ್ದುದರಿಂದ ಮೂವರೂ ಒಂದೇ ವೇಳೆಗೆ ಮಲಗಿ ನಿದ್ರಿಸುವದು ಬೇಡ ಸರತಿ–ಪ್ರಕಾರ ಪಹರೆ ಮಾಡಿ ರಾತ್ರಿ ಕಳೆಯೋಣವೆಂದು ನಿಶ್ಚಯಿಸಿದರು.

ಬಡಗ ಮೊದಲಿನ ನಾಲ್ಕು ತಾಸು, ಅಕ್ಕಸಾಲಿಗ ನಂತರ ನಾಲ್ಕು ತಾಸು, ಬೆಳಗಿನ ಜಾವ ಬ್ರಾಹ್ಮಣನು ನಾಲ್ಕು ತಾಸು, ಪಹರೆ ಮಾಡುವುದಾಗಿ ಮಾತನಾಡಿಕೊಂಡರು.

ಬ್ರಾಹ್ಮಣ ಹಾಗೂ ಅಕ್ಕಸಾಲಿಗ ಮಲಗಿ ನಿದ್ರಿಸ ಹತ್ತಿದರು. ಬಡಗ ಪಹರೆ ಮಾಡಹತ್ತಿದ್ದರಿಂದ ಹೊತ್ತು ಕಳೆಯುವದು ಬೇಸರವಾಯಿತು. ಅಲ್ಲಿಯೇ ಬಿದ್ದಂತಹ ತೇಗಿನ ಮರದ ತುಂಡೊಂದನ್ನು ತೆಗೆದುಕೊಂಡು ಸುಂದರವಾದ ಸ್ತ್ರೀ ಗೊಂಬೆಯೊಂದನ್ನು ಕೆತ್ತಿದ. ನಂತರ ಬಡಗನು ಅಕ್ಕ-ಸಾಲಿಗನನ್ನೆಬ್ಬಿಸಿ ತಾನು ಮಲಗಿಕೊಂಡ. ಈಗ ಈ ಅಕ್ಕ ಸಾಲಿಗನಿಗೂ ತನ್ನ ಪಹರೆಯ ವೇಳೆ ಕಳೆಯುವದು ಹೇಗೆಂದು ಚಿಂತಿಸುತ್ತಿರುವಾಗ ಬಡಗ ಮಾಡಿಟ್ಟಂತಹ ಗೊಂಬೆಯನ್ನು ನೋಡಿ ಹಿರಿ ಹಿರಿ ಹಿಗ್ಗಿ ಅದಕ್ಕೆ ಚಿನ್ನದ ಆಭರಣಗಳನ್ನು ಮಾಡಿ ಅಲಂಕರಿಸಿದನು. ಈಗಂತೂ ಆ ಮರದ ಗೊಂಬೆ ಅತಿ ಸುಂದರವಾಗಿ ಕಾಣಿಸಹತ್ತಿತು. ಇಷ್ಟರಲ್ಲಿ ಅಕ್ಕಸಾಲಿಗನ ಪಹರೆ ಮುಗಿಯಿತು. ಬ್ರಾಹ್ಮಣನನ್ನು ಎಚ್ಚರಿಸಿ ತಾನು ಮಲಗಿದ. ಈತ ತನ್ನ ವೇದಾಧ್ಯಯನದ ಮಂತ್ರ ಬಲದಿಂದ ಆ ಗೊಂಬೆಗೆ ಜೀವಕಳೆ ನೀಡಿದ. ಈಗ ಆ ಗೊಂಬೆ ಸುಂದರ ತರುಣಿಯಾದಳು. ಬೆಳಿಗ್ಗೆ ಆಕೆಯನ್ನು ಲಗ್ನವಾಗಲು ಈ ಮೂವರಲ್ಲೂ ಪೈಪೋಟಿ ನಡೆಯಿಸಿ ತಮ್ಮ ತಮ್ಮ ಕೈಚಳಕತನವನ್ನು ಪರಸ್ಪರ ಹೇಳಿದರು, ಕೇಳಿದರು. ಆದರೆ ಸಮಸ್ಯೆ ಬಗೆಹರಿಯದ್ದರಿಂದ ಅಲ್ಲಿನ ಒಬ್ಬ ರಾಜನಲ್ಲಿಗೆ ಹೋದರು. ಅಲ್ಲಿ ಮೂವರೂ ತಮ್ಮ ತಮ್ಮ ಕಾರ್ಯ ಪ್ರತಿಷ್ಠೆಯನ್ನು ರಾಜನೆದುರಿಗೆ ವಂದಿಸಿ ಹೇಳಿಕೊಂಡು, ತನಗೇ ಆಕೆ ಸೇರ

ಬೇಕೆಂದು ನಿವೇದಿಸಿಕೊಂಡರು.– (ವಿಚಾರಿಸಿರಿ—ಯಾರಿಗೆ ಈ ಚಲುವೆ?)

ರಾಜ ಮೊದ ಮೊದಲು ಬಡಗನನ್ನು ವಿಚಾರಿಸಿದ. ಆತನ ಹೇಳಿಕೆಯನ್ನು ಕೇಳಿಕೊಂಡು ಬಡಗನನ್ನು ಮನಸಾರೆ ವರ್ಣಿಸಿದ. ಅವನಿಗೆ ಅತೀವ ಸಂತೋಷವಾಗಿ ಈಕೆ ನನಗೇನೇ ಸೇರುತ್ತಾಳೆಂದು ಕುಣಿದಾಡಹತ್ತಿದನು. ಆದರೆ ರಾಜ ಬಡಗನಿಗೆ ಸ್ವಲ್ಪ ತಾಳು ಎಂದ. ನಂತರ ಅಕ್ಕಸಾಲಿಗನನ್ನು ರಾಜನು ವಿಚಾರಿಸಿದ. ಅವನೂ ಸಹ ತನ್ನ ಕಾರ್ಯ ಪ್ರತಿಷ್ಠೆಯನ್ನು ವಿವರಿಸಿದ. ಆಗ ರಾಜನಂತೂ ಆ ಅಕ್ಕಸಾಲಿಗನನ್ನು ವರ್ಣಿಸಿದಾಗ ಖುಷಿಯಾಯಿತು. ನಂತರ ಬ್ರಾಹ್ಮಣನ ಸರತಿ ಬಂದಾಗ ಅವನ ವೇದ ವಿದ್ಯಾಬಲವನ್ನೂ, ಮಂತ್ರ ಬಲವನ್ನೂ ಮನಸಾರೆ ರಾಜನು ಹೊಗಳಿದ. ಈಗ ಈ ಬ್ರಾಹ್ಮಣನಿಗೂ ಆನಂದವೆನಿಸಿ ಆತನ ಮುಖ ಹಿಗ್ಗಿ ಹೀರೆ ಕಾಯಾಯ್ತು. ಆಗ ರಾಜನು 'ಬ್ರಾಹ್ಮಣಾ ನೀನೂ ಸ್ವಲ್ಪ ನಿಧಾನಿಸು' ಎಂದ.

ನೀವಿಬ್ಬರೂ ಆ ಹೆಣ್ಣಿಗೆ ಜನ್ಮವಿತ್ತಂತಹ ತಂದೆಯ ಸ್ವರೂಪರು. ಕಾರಣ ಈ ಸುಂದರಿ ನಿಮ್ಮಗಿಬ್ಬರಿಗೂ ಸಲ್ಲಲಾರಳು. ಆದರೆ ಆಭರಣಗಳನ್ನು ಹಾಕಿದಂತಹ ಈ ಅಕ್ಕಸಾಲಿಗನೇ ಅವಳಿಗೆ ಮಂಗಳಸೂತ್ರ ಕಟ್ಟಲು ಯೋಗ್ಯ. ಆದ್ದರಿಂದ ಈ ಚೆಲುವೆ ಅಕ್ಕಸಾಲಿಗನನ್ನು ಲಗ್ನವಾಗಬೇಕೆಂದು ತೀರ್ಪು ಕೊಟ್ಟನು.

೮. ಜನಪದ ಹಾಸ್ಯ ಕತೆಗಳು

ಜನಪದ ಕತೆಗಳಿಗಿಂದು ಕೊರತೆಯಿಲ್ಲ. ಪೌರಾಣಿಕ ಹಾಗೂ ಐತಿಹಾಸಿಕ ಕತೆಗಳಂತೂ ಕಂತೆ-ಕಂತೆಯಾಗಿ ಅಜ್ಜ ಅಜ್ಜಿಯರ ಬಚ್ಚಬಾಯಿಂದ ಬಂದೇ ಬರುತ್ತವೆ. ಆದರೆ ಕತೆ ಕೇಳುವವರು 'ಹುಂ' ಎನ್ನಲು ಗಟ್ಟಿ ಇರಬೇಕು. ಒಮ್ಮೊಮ್ಮೆ ಕೇಳುವವರಿಲ್ಲದೆ ಬಡವಾದೆವೆನ್ನುವಂತೆ ತಮ್ಮಷ್ಟಕ್ಕೆ ತಾವೇ ಕತೆಗಳನ್ನು ಮೆಲುಕು ಹಾಕುತ್ತ ಗುಣುಗುಡುತ್ತಲಿರುತ್ತಾರೆ. ಇತ್ತೀಚೆಗೆ ಅಂಥ ಆ ಕತೆಗಳು ಅಕ್ಷರ ರೂಪತಾಳಿವೆ. ಅವರ ಭಾವ ಆಡುಮಾತಿನ ಭಾಷೆಯಾಗಿ ಹೊರಹೊಮ್ಮಿ ಬಂದಿದೆ.

ಒಮ್ಮೊಮ್ಮೆ ಈ ಜನಪದ ಕತೆಗಳು ಹೆಚ್ಚಾಗಿ ಕಟ್ಟು (ದಂತ) ಕತೆಗಳಾಗಿರುತ್ತವೆ. ತರ್ಕದ ಒರೆಗಲ್ಲಿಗೆ ಈ ಕತೆಗಳನ್ನು ತಿಕ್ಕಿ ನೋಡಬಾರದು. ಹಾಗಾದಲ್ಲಿ ಇವು ಧೂಳಿಪಟಗಳಾಗಲೂ ಬಹುದು. ಆದ್ದರಿಂದ "ಕಲೆಗಾಗಿ ಕಲೆ" ಎನ್ನುವಂತೆ 'ಕತೆಗಾಗಿ ಕತೆ' 'ಕತೆಯೊಳಗೆ ಕತೆ' ಎನ್ನುವುದೇ ಸರಿಯಾದೀತು.

ಐತಿಹಾಸಿಕ ಹಾಗೂ ಪೌರಾಣಿಕ ಕತೆಗಳು ಮೊದಲು ಜನ್ಮ ತಾಳಿದವು. ನಂತರ ದೈವದ ಕತೆ, ಆರಾಧನಾ ಕತೆ, ರಮ್ಯಕತೆ, ಒಗಟಿನಕತೆ, ಅದ್ಭುತಕತೆ, ಪ್ರಾಣಿ-ಪಕ್ಷಿಗಳ ಕತೆ ಹಾಗೂ ಹಾಸ್ಯದ ಕತೆ, ನೀತಿ ಕತೆ ಮುಂತಾದವುಗಳು ತಲೆದೋರಿದವು. ಇವೆಲ್ಲವುಗಳಲ್ಲಿ ಹಾಸ್ಯದ ಕತೆಗಳೇ ಆಬಾಲ ವೃದ್ಧರಿಗೆಲ್ಲ ಪಂಚಪ್ರಾಣ. ಆದರೆ ಕತೆ ಹೇಳುವವರು ತಮ್ಮ

ಗುರಿಯನ್ನು ನಗೆಯನ್ನಾಗಿರಿಸಿಕೊಂಡಿದ್ದರಿಂದ ಇವುಗಳಲ್ಲಿ ಶಿಥಿಲತೆ-ಹೆಚ್ಚು. ಅದರಂತೆ ಅವಾಸ್ತವತೆ ಹಾಗೂ ಅನಿರೀಕ್ಷಿ ಕತೆಗಳು ಜನಪದ ಕತೆಗಳಲ್ಲಿ ಹೆಜ್ಜೆ ಹೆಜ್ಜೆಗೂ ಹೊರೆ ಹೊರೆಯಾಗಿ ಬರುತ್ತವೆ.

ಕತೆ ಹೇಳುವವರನ್ನು ನಡುವೆ ಅವರನ್ನು ತಡೆದು ನಿಲ್ಲಿಸಿ "ಅದ್ಹೇಗ ಅಜ್ಜಾ? ಹೀಂಗ್ಯಾಕ ಅಜ್ಜಿ ಇದು?" ಎಂದರೆ ತೀರಿತು ಸುಮ್ಮನೇ ನಾ ಹೇಳಿದ್ದಕ್ಕೆ 'ಹೂಂ' ಅನ್ನೋ ಹಾಂಗ್ಯಾಕ–ಹೀಂಗ್ಯಾಕ ಅಂದ್ರ ಅದು ಹಂಗss ಇದು ಹಿಂಗss ಎಂದು ಮತ್ತೆ ತಮ್ಮ ಕತೆಯ ಜಾಡನ್ನು ಹಿಡಿಯುತ್ತಾರೆ. ಅದೇನೇ ಇದ್ದರೂ ಅವರಲ್ಲಿ ಕತೆಗಳ ಕಣಜವಂತೂ ಅಪಾರ, ಅಗಮ್ಯ. ನಾನಿಲ್ಲಿ ಸ್ಥಳಾಭಾವದ ಮೂಲಕ ಕೇವಲ ಒಂದೆರಡು ಹಾಸ್ಯ ಕತೆಗಳನ್ನು ಮಾತ್ರ ಕೊಟ್ಟಿದ್ದೇನೆ. ಅವೂ ಸಹ ನಾನೂ ಅಲ್ಲಲ್ಲಿ ಕೇಳಿದವುಗಳು ಮತ್ತು ಓದಿದವುಗಳಿರುತ್ತವೆ.

ಗೌಡರ ಮಗನ ಗೋದಿಹಿಟ್ಟಿನ ಕತೆ

ಒಂದು ಚಿಕ್ಕಹಳ್ಳಿ. ಆ ಹಳ್ಳಿಯ ಗೌಡರ ಮಗ ಹೇಳಿ ಮಾಡಿಸಿದ ಹುಂಬ, ಪುಢಾರಿ. ಲಗ್ನವಾಗದೇ ಊರಗೂಳಿಯಂತೆ ತಿರುಗುತ್ತಲಿದ್ದ. ಆ ಹಳ್ಳಿಯ ಹೆಣ್ಣುಮಕ್ಕಳು ಕೆರೆಯ ನೀರು ತರುವಾಗ ಹದಿಹರೆಯದ ಚೆಲುವೆಯರನ್ನು ಕಂಡು ಗೇಲಿ ಮಾಡುತ್ತಿದ್ದ.

ಹಾದಿಯ ಹೊಲ ಚಂದ
ಗೋದಿಯ ತೆನಿ ಚಂದ
ಗೋದಿ ಬಣ್ಣದ ಈ ಹೆಣ್ಣು ಬಲು ಚಂದss !

ಕೊಡಹೊತ್ತ ಇವಳ ನಡಿಗೆ ಏನ್ಚಂದ
ಹೋರಿ ಮೆಯ್ಸೇನಿ ಎಲೆ ಪೋರಿ
ಆದರ ಇನಿ ನೋಡು, ಮೀಸಿ ತಿದ್ದೇನಿ
ಹುರಿ ನೋಡು ಎಲೆ ಹುಡಿಗಿsss………… ……"

ಎಂದು ಮುಂತಾಗಿ ಹಾಡುತ್ತಿದ್ದ. ದಿನ ದಿನಕ್ಕೂ ಇವನ ಉಪಟಳ ಹೆಚ್ಚಾಯಿತು.

ಅದೇ ಊರಿನ ಇನ್ನೊಬ್ಬ ಶ್ರೀಮಂತ ಮನೆತನದ ಹುಡುಗನಿಗೆ ಪಟ್ಟಣದ ತಮ್ಮ ಕಲಿತ ಸುಸಂಸ್ಕೃತ ಮಗಳನ್ನು ಕೊಟ್ಟು ಬೀಗತನ ಮಾಡಿದರು. ಆದರೆ ಶಹರದ ಆ ಸುಸಂಸ್ಕೃತ ಹುಡುಗಿಯ ಗಂಡನೂ ಸಹ ಒನಕೆಯ ಮಿಂಡನೇ ಆಗಿದ್ದ. ಈತನೂ ಸಹ ಯಾವಾಗಲೂ ಕೈಯ್ಯಲ್ಲಿ ಕುಡುಗೋಲು, ಕೊಡ್ಲಿ ಹಿಡಕೊಂಡು ತನ್ನ ಕೊಕ್ಕರೆ ಮೀಸೆ ತಿರುವುತ್ತಲೇ ಇದ್ದನು. ಆದರೆ ಗೌಡರ ಮಗನ ಹಾಗೆ ಯಾವ ಹೆಂಗಸರ ಉಸಾಬರಿಗೂ ಹೋಗುತ್ತಿರಲಿಲ್ಲ. ತಾನಾಯ್ತು, ತನ್ನ ಹೊಲ, ಮನೆಕೆಲಸವಾಯ್ತು ಇಷ್ಟೇ.

ಇದೂವರೆಗೆ ಶಹರವಾಸಿಯಾಗಿದ್ದ ಈ ಕಲಿತ ಹೆಣ್ಣು ತನ್ನ ಹುಂಬ ಗಂಡನನ್ನು ಸಾಕಷ್ಟು ತಿದ್ದುವುದರಲ್ಲಿಯೇ ತಲ್ಲೀನಳಾಗಿದ್ದಳು. ಆತನ ಕೋಪ ಕಡಿಮೆಯಾಗಿತ್ತು. ಊರಿಗೆ ಬಂದವಳು ನೀರಿಗೆ ಬಾರದಿರುವಳೇ? ಅಂತೂ ಒಮ್ಮೆ ಈಕೆ ಕೆರೆಗೆ ಹೋದಾಗ ಗೌಡರ ಮಗ ಇವಳನ್ನು ನೋಡಿದ, ಹಾಡಿದ, ಕ್ಯಾಕರಿಸಿದ, ಬರತೀಯಾ? ಅಂದ ಆದರೆ ಇವಳೇನೂ ತುಟಿಪಿಟಿ್ ಅನಿಸಲಿಲ್ಲ. ಯಾಕೆಂದರೆ ಈ ವಿಷಯ ತನ್ನ

ಗಂಡನಿಗೆ ಮುಟ್ಟಿದರೆ ಈ ಊರ ಗೂಳಿಯಂತಿರುವ ಗೌಡರ ಮಗನನ್ನು ಹಾಡೇ ಹಗಲು ಜೀವಂತ ಕೊಚ್ಚಿ ಹಾಕಬಲ್ಲ ನೆಂಬುದು ಅವಳಿಗೆ ಗೊತ್ತು. ನಾನೇ ಕುಳಿತು ಈ ಮಾರಾ ಮಾರಿ ಹಚ್ಚಬಾರದು, ತಾಳಿಕೊಂಡಷ್ಟು ಒಳ್ಳೆಯದೆಂದು ಸುಮ್ಮನಿದ್ದಳು.

ಆದರೇನು? ಗೌಡರ ಮಗನಿಗೆ ಇದು ತಿಳಿಯಲಿಲ್ಲ. "ಮಾನುಳ್ಳವರು ಮಾನಕ್ಕೆ ಅಂಜಿದರೆ, ಮಾನಗೇಡಿ ತನಗೇನೇ ಹೆದರುತ್ತಾರೆನ್ನುವಂತೆ" ಮತ್ತೆ ಮತ್ತೆ ತನ್ನ ಮೊದಲಿನ ಪಲ್ಲವಿಯನ್ನೇ ಇವಳನ್ನು ಕಂಡಾಗೆಲ್ಲ ಗುಂಯ್‌ಗುಡುತ್ತಲೇ ಇದ್ದ. ಈಗ ಇವಳ ಕೋಪದ ಪಿತ್ತ ನೆತ್ತಿಗೇರಿ ಒಂದು ದಿನ ತನ್ನ ಗಂಡನನ್ನು ಕರೆದು "ಏನ್ರಿ ನನ್ನ ಮೇಲೆ ನಿಮ್ಮದು ನಂಬಿಕೆ ಇದೆಯೇ?" ಎಂದಳು. "ಅದ್ಯಾವ ನಂಬಿಕಿ?" ಎಂದು ಗುಡುಗಿದ. "ನನ್ನ ಶೀಲದ ಬಗ್ಗೆ" ಅಂದಳು "ಆಂ ಅದ್ಯಾವ ಈ ಊರಿನ ಸೂ ... ಮಕ್ಕಳು ನಿನಗ ಅಂದರು ... " ಎಂದು ಕೊಡ್ಲಿ ಮಸೆದ, ಕುಡುಗೋಲು ಅಲ್ಲಾಡಿಸಿದ. ಆದರೆ ಹೆಂಡತಿ ಸಮಾಧಾನ ಪಡಿಸಿದಳು. ಯಾಕೆಂದರೆ ಗೌಡರ ಮಗನನ್ನು ಸಾಮೋಪಾಯದಿಂದಲೇ ಮೆತ್ತಗೆ ಮಾಡಬೇಕೆಂದು ಅವಳೆಂದೋ ತೀರ್ಮಾನಿಸಿದ್ದಳು. ಆದ್ದರಿಂದ ತನ್ನ ಗಂಡನನ್ನು ಒಳಗೆ ಕರೆದು "ಅಲ್ಲ, ಈ ಊರ ಗೌಡರ ಮಗ ನನಗ ಕೆರೆಗೆ ಹೋದಾಗ ತಮಾಷೆ ಮಾಡತಾನು, ಮೇಲಾಗಿ ಕೆಟ್ಟ ಶಬ್ದ ಹಾಕಿ ಪದ ಕಟ್ಟಿ ಹಾಡತಾನು" ಎಂದು ಏಕಾಂತದಲ್ಲಿ ಹೇಳುವುದೇ ತಡ "ಇನ್ಮೇಲೆ ನೀ ಒಂದ ಶಬ್ದ ಹೇಳೂದಽ ಬ್ಯಾಡ, ಇವತ್ತೇ ಅವನ ತೆಲಿ ಕೋಕೊಂಡು ಬಂದು ನಿನ್ನ

ಕಾಲಮೇಲೆ ಹಾಕತೇನಿ . ...." ಎಂದು ಗದ್ದರಿಸಿ ಕೊಸರ್ಯಾಡಿದ
"ಕೊಂದರ ಬುದ್ಧಿ ಬಂದಾಂಗ ಆಗಲಿಲ್ಲರಿ. ಆತನ ಇಲ್ಲೆ
ನಮ್ಮ ಮನ್ಯಾಗ ಬುದ್ಧಿ ಕಲಿಸಿ ಸುಮಾರ ಮಾಡಿ ಮುಂದ್ಯಾಗ
ಮೋತಿ ಎತ್ತದಾಂಗ ಮಾಡಿದ್ರ ಸರಿ. ಹಾಂಗ ನಾನೆಲ್ಲಾ
ಮಾಡತೇನಿ ನಿಮ್ಮ ಒಪ್ಪಿಗೆ ಮಾತ್ರ ಬೇಕ ನೋಡು" ಎಂದು
ಕೇಳಿಕೊಂಡು, ತಾನು ಇನ್ನು ಮುಂದೆ ಹೂಡುವ (ಆಡುವ)
ನಾಟಕದ ಸಾರಾಂಶವನ್ನು ಗಂಡನಿಗೆ ಹೇಳಿದಾಗ ಆತ
"ಹೌದು ನೋಡ ಹೀಂಗss ಮಾಡ ಈ ಕೋಣ ಸೂ
ಮಗಗ" ಎಂದು ನಕ್ಕು ಮುಂದೆ ನಡೆಯುವ ಘಟನೆಗಳಿಗೆ
ಅವಕಾಶ ಕಲ್ಪಿಸಿಕೊಡಲು ಹೆಂಡತಿ ಹೇಳಿದಂತೆ ಹೊಲಕ್ಕೆ
ಹೋದ. ಇತ್ತ ಈಕೆ ಕೊಡ ತೆಗೆದುಕೊಂಡು ಯಥಾರೀತಿ
ಕೆರೆಗೆ ಹೋದಳು. ಪುನಃ ಇವಳನ್ನು ಕಂಡ ಗೌಡರ ಮಗ
ಅದೇ ತನ್ನ ಹಳೆಯ ಹಾಡನ್ನೇ ಹಾಡಿದ, ಮತ್ತೆ ಮತ್ತೆ
ಅದೇ ಕ್ಯಾಕರಿಸಿ, ಹೂಕರಿಸಿದ. ಆದರೆ ಎಂದೂ ಅವನತ್ತ
ನೋಡದ ಇವಳು ಇಂದು ಗೌಡರಮಗನನ್ನು ನೋಡಿ ನಕ್ಕಾಗ
ಮುಗಿಲು ಮೂರೇ ಗೇಣು ಗೌಡನಿಗೆ! ಕೊಡ ಹೊತ್ತು
ಕೊಂಡು ಮನೆಯ ಕಡೆಗೆ ಇವಳು ಹೋಗುವಾಗ ಗೌಡರ
ಮಗನಿಗೆ "ಮನೆಗೆ ಬಾ ... ಯಾರೂ ಇಲ್ಲ, ಬರಿ ಹೀಂಗ
ರಸ್ತೆದಾಗ ಮಾತಾಡಿದರ ಏನ್ ಬಂತ್ ...." ಎಂದ
ನಟಿಸಿ ಹೇಳಿ ಮುಂದಕ್ಕೆ ಸಾಗಿದಳು. ಇತ್ತ ಗೌಡರ ಮಗ
ಮೀಸ್ಯಾಗ ನಗುತ್ತ ಟಕ-ಮಕ ನೋಡುತ್ತ ಅದ್ಯಾರ ಹೆದರಿ
ಯಿಲ್ಲದೇ ಸ್ವಲ್ಪು ಅಂತರ ಬಿಟ್ಟು ಅವಳ ಹಿಂದೆಯೇ
ಹೋದ. ಕಾಮಾತುರನಿಗೆ ಯಾವ ಯಾರ ಹೆದರಿಕೆಯೂ
ಇರುವದಿಲ್ಲ. ಈಕೆ ಕೊಡ ಇಳುಹಿದಳು. ಗೌಡರ ಮಗ

ಪ್ರವೇಶವೂ ಆಯಿತು. ನಕ್ಕು ಸ್ವಾಗತಿಸಿ ಮಂಚದ ಮೇಲೆ ಹಾಸಿ ಕೂಡ್ರಿಸಿ ಹಾಲು-ಹಣ್ಣು ಕೊಟ್ಟಳು. "ನಿನ್ನ ಆ ಹುಂಬ ಗಂಡ ಎಲ್ಲಿ?" ಎಂದ. "ಆಯ್ ಹೊಲಕ ಮೇವು ತರಾಕ ಕಳಿಸೇನಿ" "ಹಾಂಗರ ಈ ಹಾಲು–ಹಣ್ಣಿಗೆ ಬೆಂಕಿ ಹಾಕು. ಬಾ ಇಲ್ಲೆ, ಬಾರss ಈಗsss ಇದ್ಯಾಗ ನಿನ್ನ ಗಂಡ ಬಂದ್ರ ಅವನೇನು ಗೊತ್ತನ್ಯಾವ? ಮೇವು ಹೆರಜು ಬದಲು ನನ್ನ ಹೆರಜಿ ಹಾಕ್ಯಾನು.... ....." ಅನ್ನುವಷ್ಟರಲ್ಲಿಯೇ ಬಾಗಿಲು ಕದ ಬಡಿದ ಸಪ್ಪಳದೊಂದಿಗೇನೆ "ಕದಾ ತಗಿ ಇದನ್ಯಾಕ ಹಾಕ್ಯಾಳಲೇ ಎಂದೂ ಇಲ್ಲದ ಇಂದ, ಈಕ್ಯಾವಕಿ" ಎಂದು ಆಕೆಯ ಗಂಡನ ಧ್ವನಿ ಕೇಳಿದಾಗ ಗೌಡರ ಮಗನು ಹೆದರಿ ಮೈ ಬೆವತಿತು. "ಕದ ಈಗ ತಗಿಬೇಡ ಹೇಗಾದರೂ ಪಾರು ಮಾಡು ಯವ್ವಾ ಸಾವುತನಕ ನಿನ್ನ ಆಳಾಗಿ ಇರತೇನಿ, ನಿನ್ನೊಬ್ಬ ತಿಳಿಗೇಡಿ ಅಣ್ಣ ಅಂತ ಈ ನನ್ನ ತಪ್ಪು ಉಡಿಯಾಗ ಹಾಕ್ಕೊ" ಎಂದು ಗದ ಗದ ನಡಗುತ್ತ ಕಾಲಿಗೆ ಬಿದ್ದ. ಆಕೆಯೂ ಹೆದರಿದಂತೆ ನಟಿಸಿ "ಇಕೋ? ಈ ಹಳೇ ಸೀರಿ ಬಡ ಬಡ ಸುತ್ತಕೋ, ತೆಲಿಗೆ ಈ ಕುಲಾಯಿನೂ ಕಟಗೋ ಹೆಡಿಗ್ಯಾಗ ಗೋದಿ ತುಂಬಿಟ್ಟೇನಿ ಬೀಸಗೊಂತ ಮುಖ ಎತ್ತದಾಂಗ ಕೂಡ್ರೂ" ಎಂದಳು. ಇಷ್ಟು ಹೇಳುವುದೇ ತಡ ಬದುಕಿತು ಬಡ ಪ್ರಾಣ ಎಂದು ಬಗೆದು ಗೌಡರ ಮಗ ಸೀರೆ ಸುತ್ತಿಕೊಂಡು, ತಲೆಗೆ ಅಮ್ಮನ ಕುಲಾಯಿ ಕಟ್ಟಿಕೊಂಡು ಗೋದಿ ಬೀಸಹತ್ತಿದ. ಕದ ತೆಗೆದಾಗ ಗಂಡ ಒಳಗೆ ಬಂದು ಜೇಕಂತಲೇ "ಇವರ್ಯಾರು ಬೀಸೂದು?" ಎಂದಾಗಂತೂ ಗೌಡರ ಮಗನಿಗೆ ಬೀಸುವಕಲ್ಲಿನ ಕೂಡ ತಾನೂ ತಿರುಗಿ ದಂತಾಯ್ತು. ಗಟ್ಟಿಗೋದಿ ಹಿಟ್ಟಾಗಿ ಬೀಳುವದರ ಬದಲು

ತನ್ನ ಜೀವವೇ ಸಣ್ಣಾಗಿ ಬೀಳುವಂತೆ ಹೆದರಿ ಹಿಪ್ಪಿಯಾಗಿದ್ದ. ಆಗ ಹೆಂಡತಿ "ಯಾರೂ ಇಲ್ಲೇಳ್ರಿ, ನಮ್ಮ ಆಚಿ ಮನೆಯ ಗಂಗಮ್ಮ ಮುದಿಕಿ ಬೀಸಾಕ ಬಂದಾಳ" ಎಂದಾಗಂತೂ ಗೌಡರ ಮಗನಿಗೆ ಬೀಸುವ ಡೊಣ್ಣೆ ತಪ್ಪಿದರೆ ಮತ್ತೆ ನೂರು ವರ್ಷ ಆಯುಷ್ಯವೆಂದೆನಿಸಿತು. ಹಾಗೇ ಮುಸುಕು ಹಾಕಿ ಕೊಂಡು ಬಿಸೋದೇ ಬೀಸೂದು. ಗಂಡನ ಸ್ನಾನವಾಯ್ತು, ಊಟವಾಯ್ತು, ಮಳೆ-ಬೆಳೆ ಆಯ್ತು, ದನಕರುಗಳ ಬಗ್ಗೆ ಗಂಡ-ಹೆಂಡ್ತಿ ಅಲ್ಲಿಯೇ ಪಡಸಾಲೆಯಲ್ಲಿ ಕುಳಿತುಕೊಂಡು ಮಾತಾಡುವದೂ ಆಯ್ತು. ಇತ್ತ ಬುಟ್ಟಿಯಲ್ಲಿನ ಗೋದಿ ಆಗಹತ್ತಿದ್ದನ್ನು ನೋಡಿ ಈಕೆ "ಗಂಗಮ್ಮ ಇಲ್ಲಷ್ಟು ನಿನ್ನ ಗೋದಿ ಅದಾವಲ್ಲ, ತಕ್ಕೊ" ಎಂದು ಪುನಃ ಮೊದಲಿನ ಬುಟ್ಟಿ ತುಂಬ ಗೋದಿ ಸುರುವಿದಳು.

ಈಗಾಗಲೇ ಚಿಟ್ಟಿ (ಎಂಟು ಸೇರು) ಗೋದಿ ಬೀಸಿದ್ದಾನೆ. ರಟ್ಟೆ ಹರಕೊಂಡು ಬಿದ್ದಂತಾಗಿವೆ, ಮುಂಗೈ ಸೋತಿವೆ, ಅಂಗೈಗೆ ಗುಳ್ಳೆಗಳೆದ್ದು ಒಡೆದಿವೆ. ಆಕೆಯ ಗಂಡ ಎದ್ದು ಹೊರಗೆ ಹೋಗದೇ ಅವನ ಬೆನ್ನು ಹಿಂದೆಯೇ ಒಂದರ ಮೇಲೊಂದು ದರ್ಬಾರ ಬೀಡಿ ಸೇದುತ್ತ ಕುಳಿತಿದ್ದಾನೆ. ಗಂಡ-ಹೆಂಡ್ತಿ ಕ್ಯಾಕರಿಸಿ-ಹೂಂಕರಿಸಿ ಸುಮ್ಮನೇ ಯಾವುದೋ ಒಂದು ಮಾತಿಗೆ ಬಿದ್ದು-ಬಿದ್ದು ನಗುತ್ತಿದ್ದಾರೆ. ಬೆಕ್ಕಿಗೆ ಆಟ ಇಲಿಗೆ ಪ್ರಾಣಸಂಕಟವೆನ್ನುವಂತಾಯಿತು. ಎರಡು-ಮೂರು ತಾಸಾಯ್ತು "ನಾನಷ್ಟು ಹೊಲದ ಕಡೆಗೆ ಹೋಗಿ ಬರ್‍ತೇನಿ" ಎಂದು ನಗುತ್ತ ಅವಳ ಕಿವಿಯಲ್ಲಿ "ಬೇಸಿ ಮಾಡಿದಿ ನೋಡು ಈ ಹುಂಬಗೌಡಗ ಹೌದಂದೇನಿ ನಿನ್ನ ನಾಟಕಕ್ಕ" ಎಂದು ಅವಳ ಮುಂಗೈ ಹಿಚುಕಿ ಹೊರನಡೆದ.

ಇಷ್ಟು ಹೊತ್ತಿನವರೆಗೆ ತಡೆದದ್ದೇ ಸಾಕಾಗಿತ್ತು. ಆತ ಹೋದ ಮೇಲೆ ಒಂದೆರಡು ಮುಕ್ಕು ಬೀಸಿದವನೇ ಸತ್ತೆನೋ-ಕೆಟ್ಟೆನೋ ಎಂದು ಸೀರೆ ಕಳೆದೊಗೆದು, ಕುಲಾಯಿ ಬಿಚ್ಚುವದನ್ನು ಮರೆತು ಹುಲಿ ಬೆನ್ನು ಹತ್ತಿದಾಗ ಓಡುವವರಂತೆ ರಕ್ತ ಸೋರುವ ಕೈಗಳನ್ನು ತನ್ನ ಧೋತರದ ಸೀರಗ್ಯಾಗ ಇಟಗೊಂಡು ಮನೆಕಡೆಗೆ ಓಡಿದ್ದೇ ಓಡಿದ್ದು. ದಾರಿಯಲ್ಲಿ ಕುಲಾಯಿ ಕಟಗೊಂಡ ಗೌಡರ ಮಗನನ್ನು ನೋಡಿ ನಗುವವರಿಗೇನು ಕಡಿಮೆಯೇ ? 'ಕಳ್ಳನ ಜೀವ ಹುಳ್ಳುಳ್ಳಗ' ಎನ್ನುವಂತೆ ಇವರೆಲ್ಲ ನಡೆದ ಸಂಗತಿ ಗೊತ್ತಿದ್ದೇ ನಗುತ್ತಿದ್ದಾರೆಂದು ಪೆಚ್ಚುಮುಖ ಹಾಕಿಕೊಂಡು ಮನೆಗೆ ಹೋದಾಗ ಅವರೆಲ್ಲರೂ 'ಈ ಕುಲಾಯಿ ಏಕೆ ?' ಅಂದಾಗಲೇ ಎಚ್ಚರ ಬಂದಂತಾಯ್ತು. ಅಂತೂ ಗೌಡರ ಮಗ ಒಂದು ವಾರದವರೆಗೆ ಹೊರಗೆ ಬರಲಿಲ್ಲ. ಇತ್ತ ಈಕೆ ಗೋದಿ ಹಿಟ್ಟನ್ನು ತುಂಬಿದಾಗ ಗಿದ್ದಣ ಹೆಡಿಗೆ ತುಂಬಿತು. ನಕ್ಕಳು. ಈಗೀಗ ಕೆರೆಯ ಸಮೀಪ ಅವನ ಸುಳಿವು ಇಲ್ಲ. ಅಕಸ್ಮಾತ್ ಎರಡು ವಾರಗಳ ಮೇಲೆ ಕೆರೆದಂಡೆಯ ಮೇಲೆ ಗೌಡರ ಮಗ ನಿಂತದ್ದು ನೋಡಿದಳು. ಈಕೆಯನ್ನು ನೋಡಿ ಇವಳತ್ತ ಬೆನ್ನುಮಾಡಿ ನಿಂತನು. ಈಗ ಅವನು ಕ್ಯಾಕರಿಸಲಿಲ್ಲ, ಹೂಂಕರಿಸಲಿಲ್ಲ, ಗೇಲಿಯ ಮಾತಂತೂ ಇಲ್ಲವೇ ಇಲ್ಲ. ಹಾಗೆ ಸುಮ್ಮನೇ ನಿಂತ ಗೌಡರ ಮಗನನ್ನು ನೋಡಿ ಬೇಕಂತೆಯೇ ಇವಳೇ ಕೆಮ್ಮಿದಳು-ಕ್ಯಾಕರಿಸಿದಳು. ಆದರೆ ಅವನಂತೂ ಮಿಸುಕಾಡಲಿಲ್ಲ. ಕೊನೆಗೆ ಇವಳೇ "ಏನ್ರೀ ಗೌಡರ ಈಗ ಹದಿನೈದು ದಿಸದಿಂದ ನಿಮ್ಮ ದರ್ಶನ ಇಲ್ಲಲ್ಲರೀ ?" ಎಂದಾಗ ಗೌಡರ ಮಗ ಮನಸ್ಸಿಲ್ಲದ ಮನಸ್ಸಿನಿಂದ "ಯಾಕಬೇ(ವಾ),

ಆಕ್ಯಾ ಗೋದಿ ಹಿಟ್ಟು ಮತ್ತ ಆಗೇತೇನು ?" ಎಂದು ಕೈ ಮುಗಿದು ಮುಂದಕ್ಕೆ ಸಾಗಿದ. (ಈ ಕತೆ ಧಾರವಾಡ ಕ. ಕಾಲೇಜಿನ ಪ್ರೊ॥ ಬೀಳಗಿಯವರು ತಮ್ಮ ಭಾಷಣದಲ್ಲಿ ಹೇಳಿದ್ದರು.)

ಏಳು ಜನ ದಡ್ಡ ಕುರುಬರು

(ಸಂಗ್ರಹ "ಜನಪದ ಕಥಾಸಂಗಮ" ಡಿ. ಲಿಂಗಯ್ಯ)

ಒಂದು ಗ್ರಾಮ. ಗ್ರಾಮದೇವತೆಯ ಉತ್ಸವ ಪ್ರತಿ ವರುಷ ನಡೆಯುತ್ತಿತ್ತು. ಊರವರೆಲ್ಲ ವಂತಿಗೆ ಕೂಡಿಸಿ ದೂರದ ಪಟ್ಟಣದಿಂದ ಆನೆಯೊಂದನ್ನು ತರಿಸಿ ಆನೆ ಮೇಲೆ ದೇವತೆಯ ಮೆರವಣಿಗೆ ನಡೆಯುತ್ತಿತ್ತು. ಇದು ಆ ಏಳು ಜನ ಕುರುಬರಿಗೂ ಸರಿಕಾಣಿಸದೇ ತಮ್ಮ ಇದ್ದ ಬಿದ್ದ ಹಣ ವನ್ನೆಲ್ಲ ಕೂಡಿಸಿ ಆನೆ ತರಲು ಹೊರಟರು. ಊರೂರಿಗೆ ಹೋಗಿ ಇಲ್ಲಿ ಆನೆಗಳು ಮಾರಾಟಕ್ಕಿವೆಯೇ ? ಎಂದು ಕೇಳುತ್ತಲೇ ಹೋದರು. ಸಾಕಷ್ಟು ಊರು-ಕೇರಿ ತಿರುಗಿ ದರೂ ಸಿಗದಿದ್ದಾಗ ನಿರಾಶರಾಗಿ ಒಂದು ದಿನ ಕುಳಿತಾಗ ಒಬ್ಬನನ್ನು ವಿಚಾರಿಸಿದಾಗ "ನನ್ನಲ್ಲಿ ಬಿಳಿ ಆನೆ ತತ್ತಿ ಇದೆ. ಆರು ಸಾವಿರ ರೂಪಾಯಿ ಆಗುತ್ತದೆ, ಬೇಕೆಂದರೆ ತಗೊಂಡು ಹೋಗ್ರಿ. ನೆಲದ ಮೇಲೆ ಇಡಬೇಡ್ರಿ, ನೆಲುವಿನ ಮೇಲಿಡ ಬೇಕು. ತಿಂಗಳೊಪ್ಪತ್ತಿನಲ್ಲಿ ಬಿಳಿ ಆನೆ ಮರಿ ಬರುತ್ತದೆ" ಎಂದಾಗ ಸಂತೋಷಭರಿತರಾಗಿ ಅವನ ಮನೆಗೆ ಹೋಗಿ ಕುಳಿತು ರೂಪಾಯಿ ಎಣಿಸಿದಾಗ ಆತ ತೆಂಗಿನಕಾಯಿಗೆ

ಸುಣ್ಣ ಹಚ್ಚಿ ಇಕೋ ಇದೇ ಬಿಳಿ ಆನೆ ತತ್ತಿ ನಾ ಹೇಳಿದ್ಹಂಗ ಮಾಡ್ರಿ" ಅಂದ.

ದಾರಿಯಲ್ಲಿ ಎಲ್ಲೂ ನೆಲಕ್ಕಿಡದೇ ಕೈಯಿಂದ ಕೈಗೆ ಬದಲಾಯಿಸುತ್ತ ಬಂದರು. ಒಂದೆಡೆಗೆ ಹೊಳೆ ಹರಿಯುತ್ತಿತ್ತು. ನೀರು ಕುಡಿಯಲೆಂದು ಆರು ಜನ ಹೋದರು. ನೀರು ಕುಡಿದು ಈಸ್ಯಾಡಹತ್ತಿದರು. ಇಲ್ಲಿ ತತ್ತಿ ಹಿಡಿದು ನಿಂತವ ಬೇಸೊತ್ತು ಅಲ್ಲೇ ಒಂದು ಮಾವಿನ ಗಿಡದ ಬೊಡ್ಡೆಯ ಮೇಲಿಟ್ಟು ಕರೆಯಲು ಹೋದಾಗ ಅವರೆಲ್ಲರೂ "ಅಯ್ಯೋ! ಬಿಳಿ ಆನೆ ತತ್ತಿಯನ್ನು ನೆಲಕ್ಕೆ ಇಟ್ಟು ಬಂದೆಯಾ ?" ಎಂದು ಬಯ್ಯುತ್ತ ಬರುವಷ್ಟರಲ್ಲಿ ಇವರ ಬಾಯಿಗೆ ಆ ಮರದ ಪೊಟರೆಯೊಳಗಿದ್ದ ಮೊಲವೊಂದು ಕೆಳಗೆ ಜಿಗಿದು ತೆಂಗಿನಕಾಯಿಯನ್ನು ಕೆಡವಿ ಓಡಿ ಹೋಯಿತು. ಇದನ್ನು ಕಂಡ ಆ ಏಳೂ ಜನರು ಬಿಳಿ ಆನೆ ಮರಿ ಹೊರಗ ಬಂತು, ಓಡಿ ಹೋಯ್ತೆಂದು ಹಿಡಿಯಲು ಹೆಣಗಾಡಿ ಸೋತು ಸುಣ್ಣವಾದರು. ನಿರಾಶರಾಗಿ ಊರ ದಾರಿ ಹಿಡಿದರು. ಹೊಟ್ಟೆಯ ಹಸಿವು ತಾಳಲಾರದೇ ಅಲ್ಲೊಂದು ಊರ ಗೌಡರ ಮನೆಯಲ್ಲಿ ಲಗ್ನ ನಡೆಯುತ್ತಿತ್ತು. ಹೋಗಿ ತಮ್ಮ ಪರಿಸ್ಥಿತಿ ಹೇಳಿ ಊಟಕ್ಕೆ ಬೇಕೆಂದಾಗ ಅವರು 'ಎಲ್ಲಾ ಕಾರಣ-ಕಟ್ಟು ಮುಗೀಲಿ ಹಾಕ್ತೇವೆ ವಸಿ ಇಲ್ಲೇ ಇರಿ' ಎಂದರು.

ಈಗ ಈ ಏಳೂ ಜನರು ಒಬ್ಬರಿಗೊಬ್ಬರು ಊಟಕ್ಕೆ ಕೊಡ್ತೇವಿ ಅಂದರು ವಿನಃ ಊಟಕ್ಕೆ ಎಲೆ ಕೊಡ್ತೇವಿ ಅಂದಿಲ್ಲ. ಆದ್ದರಿಂದ ಎಲೆ ತರೋದು ಯಾರು ? ಎಂದು

ತಮ್ಮ-ತಮ್ಮಲ್ಲಿ ಬಡಿದಾಡಿ ಕೊನೆಗೆ ಅವರಲ್ಲೊಬ್ಬ "ಇನ್ನು ಮೇಲೆ ಯಾರು ಮಾತಾಡ್ತೀರೋ, ಕೊಂಯ್ ಅಂತಿರೋ, ಮಿಸಗತಿರೋ ಅವರೇ ತರಬೇಕೆಂದನು". ಆಗ ಎಲ್ಲರೂ ಸತ್ತವರಂತೆ ಮಲಗಿಕೊಂಡರು.

ವೇಳೆಯಾಗಿ ಊಟಕ್ಕೆ ಎಬ್ಬಿಸಲು ಬಂದು ಹೊಳ್ಳಾಡಿಸಿದರು, ಕೂಗಿದರು. ವಾಲಿಕಾರ ಬಂದು ತನ್ನ ಬಡಿಗೆಯಿಂದ ಮಲಗಿದ ಇವರ ಪಕ್ಕಡಿಗೆ ಚುಚ್ಚಿದರೂ ಮಿಸಗಲಿಲ್ಲ. ಊರವರು ಪಾಪ ! ಸತ್ತೆ ಹೋದರೆಂದು ದೊಡ್ಡ ಕುಣಿ ತೆಗೆಯಿಸಿ ಒಬ್ಬೊಬ್ಬರನ್ನೇ ಹೊತ್ತು ಕುಣಿಯಲ್ಲಿ ಒಗೆದರು, ಕೊನೆಯುವನನ್ನು ಒಗೆಯುವಾಗ ಎಲ್ಲೋ ಒಂದು ಚೂಪುಗಲ್ಲು ತಲೆಗೆ ನಟ್ಟಾಗ ಆತ "ಅಯ್ಯೋ ಯಪ್ಪಾ-ಯವ್ವಾ" ಎಂದು ಚೀರಿ ಕೆಳಗೆ ಬಿದ್ದಾಗ ಅವರೆಲ್ಲರೂ "ಹಾಂ ! ನೀನೇ ಈಗ ಎಲಿ ತರೋದು" ಎಂದು ಸಂತೋಷದಿಂದ ಹೊರಬಂದರು. ಊರವರೆಲ್ಲರೂ ಇವರ ದಡ್ಡತನಕ್ಕೆ ನಕ್ಕರು.

ಒಂದು ಸೇರು ಜೋಳ

'ಡಾ॥ ಬಸವರಾಜ ಮಲಶೆಟ್ಟಿ
"ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು"'

ಒಂದೂರು. ಇಬ್ಬರು ಗಂಡ-ಹೆಂಡ್ತಿ ಬಹಳ ಜಿಪುಣರು. ದಾನ-ಧರ್ಮ ಗೊತ್ತಿದ್ದಿಲ್ಲ. ಒಂದುದಿನ ಪರಮೇಶ್ವರ ಅವರಿಂದ ಒಂದು ಸೇರು ಜೋಳ ಪಡೆದುಕೊಳ್ಳುವೆನೆಂದು ಪಾರ್ವತಿಗೆ ಹೇಳಿ ಹೊರಟ. ಪಾರ್ವತಿ ಅದು ಮಾತ್ರ ಸಾಧ್ಯವಿಲ್ಲ, ಬೇಡವೆಂದು ಹೇಳಿದಳು.

ಪರಮೇಶ್ವರ ಜಂಗಮನಾಗಿ ಬಂದು ಭಿಕ್ಷೆ ಕೇಳಿದ. ಆಗ ಅವನ ಹೆಂಡತಿ ನೀರಿಗೆ ಹೋಗಿದ್ದಳು. ಗಂಡ "ಈಗ ಮನೆಯಲ್ಲಿ ಏನೂ ಇಲ್ಲ, ರಾಶಿ ಮಾಡುವ ಕಾಲಕ್ಕೆ ಬಾ" ಎಂದ. ಶಿವ ತಿರುಗಿ ಹೋದ. ರಾಶಿ ಮಾಡುವ ಕಾಲಕ್ಕೆ ಪುನಃ ಬಂದು ಭಿಕ್ಷೆ ಕೇಳಿದ. ಆಗ ಗಂಡ "ಹೆಂಡತಿಗೆ ಹೇಳದೇ ನಾನೇನೂ ಕೊಡುವುದಿಲ್ಲ. ಆಕೆ ರೊಟ್ಟಿ ಮಾಡು ತ್ತಿರಬೇಕು, ನಾನು ತಿನ್ನುತ್ತಿರಬೇಕು ಅವಾಗ ಬಾ" ಎಂದ. ಅದೇ ರೀತಿ ಸಮಯ ಸಾಧಿಸಿ ಅದೇ ವೇಳೆಗೆ ಶಿವ ಬಂದು ಸೇರು ಜೋಳ ಕೇಳಿದ. ಈಗಂತೂ ಜಿಪುಣನಿಗೆ ಜೀವದ ಸುತ್ತೇ ಬಂತು. ನಂತರ ಸತ್ತಂತೆ ನಟಿಸಿ ಬಿದ್ದು ಬಿಟ್ಟ. ಹೆಂಡ್ತಿ ಎದ್ದು ಬಂದು "ಈಗ ಮನೆಯಲ್ಲಿ ಗಂಡ ಸತ್ತಿದ್ದಾನೆ. ನಿನಗೆಲ್ಲಿಯ ಜೋಳ ?" ಎಂದು ಅಳಹತ್ತಿದಳು.

ಪರಮೇಶ್ವರ "ಸತ್ತವನನ್ನು ಹಾಗೆ ಬಿಟ್ಟು ಹೋಗು ವದು ಹೇಗೆ ? ಅದು ಧರ್ಮವಲ್ಲ ತಾಯಿ. ಮಣ್ಣು ಕೊಟ್ಟೇ ಹೋಗುವೆ" ಎಂದು ಹೇಳಿ ಜನರನ್ನು ಕೂಡಿಸಿ ಮಣ್ಣು ಕೊಡುವ ವ್ಯವಸ್ಥೆ ಮಾಡಿಯೇ ಬಿಟ್ಟ. ಆಗ ಹೆಂಡ್ತಿ ಗಂಡ ನನ್ನು "ಒಂದು ಸೇರು ಜೋಳ ಹೋದರೆ ಹೋಗಲಿ, ಕೊಡಲೇ ?" ಎಂದು ಕದ್ದು ಕೇಳಿದಳು. ಗಂಡ ಒಪ್ಪಲಿಲ್ಲ. ಹೆಣವನ್ನು ಹೊತ್ತು ಸುಡುಗಾಡಿಗೆ ನಡದೇ ಬಿಟ್ಟರು. ಕುಣಿ ಯಲ್ಲಿಟ್ಟು ಮಣ್ಣು ಮುಚ್ಚಹತ್ತಿದರು. ಆಗ ಹೆಂಡ್ತಿ ಗಂಡನನ್ನು ಚಿವುಟಿ "ಜೋಳ ಕೊಟ್ಟು ಬಿಡಲೇ ?" ಎಂದು ಕಣ್ಣೀರು ಸುರಿಸುತ್ತ ಕೇಳಿದಳು. ಆಗಲೂ ಗಂಡ ಒಪ್ಪಲಿಲ್ಲ.

ಕುತ್ತಿಗೆವರೆಗೂ ಮಣ್ಣು ಬಂತು. ಈಗ ತುಟಿ ಬಾಯಿ ವರೆಗೂ ಮಣ್ಣು ಬಂತು. ಪರಮೇಶ್ವರ ಒಳಗೊಳಗೇ

ಸಿಡಿಮಿಡಿಗೊಂಡು ತಾಳಲಾರದೇ "ನನಗೆ ಜೋಳ ಬೇಡ" ವೆಂದ ಕೂಡಲೇ ಗಂಡ ಮುಚ್ಚಿದ್ದ ಮಣ್ಣು ಕೊಡವಿಕೊಂಡು ಪುಟಿದೆದ್ದು ನಗುತ್ತ ಹೊರಬಂದ. ಜನರೆಲ್ಲರೂ ದೆವ್ವ ಅಂತ ತಿಳಿದು ಓಡಲಾರಂಭಿಸಿದರು. ಆಗ ಜಂಗಮರೂಪಿ ಶಿವನೇ ಎಲ್ಲ ತಿಳಿಸಿ ಹೇಳಿದ. ಪಾರ್ವತಿ ಹತ್ತಿರ ತನ್ನ ಸೋಲನ್ನು ಶಿವ ಒಪ್ಪಿಕೊಂಡ.

೯. ಚತುರೋಕ್ತಿಗಳಲ್ಲಿ ಹಾಸ್ಯ

ಚತುರೋಕ್ತಿಗಳು ಹಾಸ್ಯದ ಅತ್ಯುತ್ತಮ ಪ್ರಭೇದ. ಚತುರೋಕ್ತಿಯಲ್ಲಿ ಅರ್ಥ-ಭಾವಗಳನ್ನು ಬೇಕಾದ ಹಾಗೆ ಬದಲಿಸಿಕೊಳ್ಳಬಹುದಾಗಿದೆ. ಚತುರೋಕ್ತಿಗೆ ಬಾಯಿ ಒಂದಿದ್ದರೂ ನಾಲಿಗೆಗಳೆರಡೆಂದು ಹಲವು ಪ್ರಸಿದ್ಧ ನಗೆ ಬರಹಗಾರರ ಅಭಿ-ಪ್ರಾಯವಿದೆ.

ಹೊತ್ತಿಗೊದಗಿದ ಮಾತು ಸತ್ತವನು ಎದ್ದಂತೆ ।
ಹೊತ್ತಾಗಿ ನುಡಿವಾ ಮಾತು ಕೈಜಾರಿದಾ ।
ಮುತ್ತಿನಂತಿಹುದು ಸರ್ವಜ್ಞ ॥

ಸರ್ವಜ್ಞನ ಈ ತ್ರಿಪದಿ ಚತುರೋಕ್ತಿಗೆ ವ್ಯಾಖ್ಯೆ ನೀಡಿದಂತಿದೆ. ಸಂಭಾಷಣೆಯ ಸಮಯದಲ್ಲಿ ತರ್ಕ-ವಿತರ್ಕಗಳಲ್ಲಿ ಆಪತ್ಕಾಲ ದಲ್ಲಿಯೂ ಹಲವರಿಗೆ ತಮ್ಮಷ್ಟಕ್ಕೆ ತಾವೇ ಈ ಚತುರೋಕ್ತಿಗಳು ಹೊಳೆಯುತ್ತಿವೆ. ಈ ಚತುರೋಕ್ತಿಗಳಿಗೆ ಹಳ್ಳಿ ದಿಳ್ಳಿಯ ಜನರೆಂಬ ಭೇದ-ಭಾವವಿಲ್ಲ. ಆದರೆ ನಾನು ಮಾತ್ರ ಇಲ್ಲಿ ಅ

ಭೇದಮಾಡಿ ಕೇವಲ ಜನಪದ ಚತುರೋಕ್ತಿಗಳನ್ನು ಇಲ್ಲಿಡಲು ಪ್ರಯತ್ನಿಸಿದ್ದೇನೆ.

(೧)

ಮನೆಗೆ ಹೊಸದಾಗಿ ಬಂದ ಅಳಿಯನನ್ನು ಅತ್ತೆ ಸ್ವಾಗತಿಸಿ ನಂತರ ತರಹ ತರಹದ ಭಕ್ಷ್ಯ-ಭೋಜ್ಯಗಳನ್ನು ನೀಡಿ ಉಣಿಸುತ್ತಿದ್ದಾಳೆ. ಅಳಿಯ ನಾಚಬುರಕ-ಅತ್ತೆ ಮರಗೂಳಿ. ಹಪ್ಪಳ-ಸಂಡಿಗೆ ಕರಿದು ಒಲೆಮೇಲೆ ಇಟ್ಟಿದ್ದಾಳೆ. ಕರಿದ ಘಮ-ಘಮ ಪರಿಮಳ ಅಳಿಯನ ಮೂಗಿಗೆ ತೆರೆ-ತೆರೆಯಾಗಿ ಅಪ್ಪಳಿಸುತ್ತಲೇ ಇದೆ. ಆಕೆ-ಅಳಿಯನ ಹತ್ತಿರ ಕುಳಿತು ಮಾತಿನ ಪಟ ಬಿಚ್ಚಿ ಹಪ್ಪಳ-ಸಂಡಿಗ ನೀಡುವದನ್ನೇ ಮರೆತಳು. ಇತ್ತ ಅಳಿಯ ತನ್ನ ಅತ್ತೆಗೆ "ನಾನು ಬರುವಾಗ ದಾರ್‍ಯಾಗ ಒಂದು ಹಾವು ನೋಡಿದೆ. ಛೇ, ಛೇ, ಎಷ್ಟುದ್ದದ ಸರ್ಪವದು. ಇಲ್ಲಿಂದ ಅತ್ತೆ ಆ ಹಪ್ಪಳ-ಸಂಡಿಗೆ ಕರದ ಇಟ್ಟೀಯಲ್ಲ ಒಲಿಮ್ಯಾಲೆ ಅಲ್ಲಿಯ ತನಕ ಉದ್ದಿತ್ತು ನೋಡು" ಎಂದಾಗ ಅತ್ತೆ ತಾನು ಕರಿದಿಟ್ಟ ಹಪ್ಪಳ-ಸಂಡಿಗೆಗಳ ಕಡೆಗೆ ಸಟ್ಟನೇ ನೋಡಿ "ಅಯ್ ತಮ್ಮಾ ಈಗ ನೆನಪಾಯ್ತು ನೋಡು, ನಿನಗ ಅವನ್ನ ನೀಡೇ ಇಲ್ಲ" ವೆಂದು ಅವಸರದಿಂದ ನೀಡಿದಳು. ಅಳಿಯ ತನ್ನ ಚತುರೋಕ್ತಿ ಫಲಿಸಿತೆಂದು ಕಳ್ಳನಗೆ ನಕ್ಕು ಉಣ್ಣಹತ್ತಿದ.

(೨)

ಹಳ್ಳಿಗಳಲ್ಲಿ ಹರಟೆಮಲ್ಲರಿಗೇನೂ ಬರಗಾಲವಿಲ್ಲ. ಸತ್ಯದ ಮುಖದ ಮೇಲೆ ಹೊಡೆಯುವಷ್ಟರ ಮಟ್ಟಿಗೆ ಚಾಣಾಕ್ಷತನದ

ಸುಳ್ಳು ಹೇಳುತ್ತಾರೆ. ಹೀಗೇನೇ ಒಮ್ಮೆ ಒಬ್ಬ ಒಡಪಿನ ರೂಪದಲ್ಲಿ ಕನಕನ ಮುಂಡಿಗೆ ಉರುಳಿಸುತ್ತಾನೆ : "ಏನ್ರೆಪಾ ನಮ್ಮ ಹೊಲದ ಮೂರು ತಿಂಗಳ ಕಡ್ಲಿ ಮೊಳಕಾಲು, ನಾಲ್ಕು ತಿಂಗಳದ ಜೋಳ ಜಾಲಿಗಿಡದಷ್ಟು, ಐದು ತಿಂಗಳ ಹತ್ತಿ ಅತ್ತಿ ಗಿಡದ್ಹಾಂಗ, ಹಾಗಾದ್ರೆ ನನ್ನ ವಯಸ್ಸೆಷ್ಟು ? ಹೇಳ್ರಿ" ಎಂದಾಗ ಎಲ್ಲರೂ "ಏನ್ ನಿನ್ನ ಮಾತಿಗೆ ಮಾರಿ ಇಲ್ಲ–ಮಸಡಿ ಇಲ್ಲ ಹ್ಯಾಂಗ್ ಹೇಳಾಕ ಇದರಾಗ ದಾರಿ ?" ಎಂದಾಗ ಅವರಲ್ಲೊಬ್ಬ "ಅದೇನ್ ಆಗಾದ ? ನಾಲ್ವತ್ತೆರಡು ವರ್ಷ ಆಗಿರಲೇಬೇಕು" ಎಂದು ಜಾಲಬೀಸಿದ. "ಅದ್ಹೇಗೆ ಅಷ್ಟು ಕರೆಕ್ಟ ಹೇಳ್ತಿಯೋ ನನ್ನ ವಯಸ್ಸು ?" ಮರುಪ್ರಶ್ನೆ ಹಾಕಿದಾಗ "ನಿಮ್ಮ ಮನಿ ಹತ್ತಿರ ಅದಾನಲ್ಲ ಆರೇರ ಅರಬ ಎಂಕ್ಯಾ ಆತ ಮೊನ್ನೆ ಆರನೇಸಲ ಮ್ಯಾಟ್ರಿಕಿ ನಪಾಸಾಗಿ ತೆಲಿಕೆಟ್ಟು ಅರ-ಹುಚ್ಚಾಗಿ ತಿರಗ್ಯಾಡತಾನಲ್ಲ ಅವಗ ಇಪ್ಪತೊಂದು ನೆಡಿತಾವಂತ. ಆವನಂತೂ ಹೇಳಿಕೇಳಿ ಅರಹುಚ್ಚ ಸೂಳಿಮಗ. ಅಂದಮ್ಯಾಲೆ ನಿನಗ ನಾಲ್ವತ್ತೆರಡು ಇರಾಕಬೇಕು" ಅಂದಾಗ ಸುಣ್ಣತಿಂದ ಮಂಗನ ಹಾಗೆ ಪೂರಾಹುಚ್ಚನೇನಿಸಿಕೊಂಡು ಸುಮ್ಮನೆ ಕುಳಿತ.

(೩)

ಒಂದು ಹಳ್ಳಿ. ಗಂಡ–ಹೆಂಡ್ತಿ ಮೂರು ಮಕ್ಕಳ ಸಂಸಾರ ಇತ್ತು. ಗಂಡನಿಗೆ ಹೊರ ಚಾಳಿ. ದಿನಾಲೂ ರಾತ್ರಿ ಊಟವಾದ ಮೇಲೆ ಬಗಲಾಗ ಚಾಪಿ ಇಟಗೊಂಡು, ದರಬಾರ ಚುಟ್ಟಾ ಧಮ್ ಹತ್ತುವಂಗ ಎಳಕೊಂತ "ಏ, ಏ, ಮೂರು ಮಕ್ಕಳ ತಾಯಿ ಹೋಗಿ ಬರ್ತೇನಿ ಕದಾ ಹಾಕ್ಕೊ" ಎಂದು ಹೆಂಗಸಿನ ಮನೆಗೆ ಹೋಗುತ್ತಿದ್ದ. ಹೋದವರ ಹೋಗಲಿ ಆದರ ನನ್ನ

ದಿನಾನೂ ಇಷ್ಟು ಅಣಕ ಮಾಡಿ ಮಂದ್ಯಾಗ ಮಾನ ತಗದ ಹೊಕ್ಯಾನಲ್ಲ ಎಂದು ಒಳಗೊಳಗೇ ಕುದಿಯುತ್ತಿದ್ದಳು. ಯಥಾ ಪ್ರಕಾರ ರಾತ್ರಿ ಊಟವಾದ ಮೇಲೆ ಮನೆ ಮುಂದೆ ನೆರೆಹೊರೆಯ ಹೆಣ್ಣುಮಕ್ಕಳ ಸಂಗಡ ಮಾತಾಡುತ್ತ ಅವನ ಹೆಂಡ್ತಿ ಕುಳಿತಾಗ ಈತನ ಸವಾರಿ ಹೊಂಟಿತು. “ಏ ಏ ಮೂರು ಮಕ್ಕಳ ತಾಯಿ ಹೋಗಿ ಬರ್ತೇನಿ ಕದಾ ಹಾಕ್ಕೋ” ಎಂದಾಗ ಆಕೆಯೂ ತಡಮಾಡದೆ “ಹೋಗಿ ಬಾ ನೀ ಒಂದೇ ಮಗುವಿನ ತಂದೆ” ಎಂದಾಗ ಆತನ ಬಗಲ ಚಾಪಿ ಕೆಳಗೆ ಬಿತ್ತು.

(೪) ಹಾಸಿಗೆ ಪಥ್ಯ

ಹಳ್ಳಿಯ ರೈತನೊಬ್ಬ ಡಾಕ್ಟರ್ ಬಳಿಗೆ ಬಂದು ತನ್ನ ಕಾಯಿಲೆ ತಪಾಸಿಸಿಕೊಂಡು ಔಷಧೋಪಚಾರ ಮಾಡಿಸಿಕೊಂಡ.

ಡಾಕ್ಟರ್ : ನೋಡಪಾ ರೈತ, ಒಂದ ತಿಂಗಳ ಹಾಸಿಗೆ ಪಥ್ಯ ಮಾತ್ರ ಕಟ್ಟ ನಿಟ್ಟಾಗಿ ಪಾಲಿಸಬೇಕು—ಮರೆಯಬೇಡ.

ರೋಗಿ : ಅಯ್ಯೋ ಸಾಹೇಬ್ರ ನನಗೇನ್ರಿ ಹಾಸಿಗಿ ಇರದಿದ್ರೂ ನಡಿತೇತಿ, ಬರೆ ನೆಲಾ ಆದ್ರೂ ನನಗ ಸೈ. ನಿಮ್ಮಂಥ ದೊಡ್ಡವರಿಗೆ ಹಾಸಿಗಿ.

(೫)

ಪ್ರೊ॥ ಎಸ್. ವ್ಹಿ. ಪರಮೇಶ್ವರಭಟ್ಟರ “ಇಂದ್ರಚಾಪ” ದಲ್ಲಿ ಗಂಡ-ಹೆಂಡ್ತಿಯರ ನಡುವೆ ಸೀರೆ ತರುವುದರ ಬಗ್ಗೆ ಜಗಳ. ಗಂಡ ತರಲೇ ಇಲ್ಲ. ನಿರಾಶಳಾಗಿ ಒಂದಿನ

ಮುಂಜಾನೆದ್ದು ಗಂಡನಿಗೆ "ನಲ್ಲ ನಿನ್ನೆ ರಾತ್ರಿ ನಾನೊಂದು ಕನಸು ಕಂಡೆ. ನೀವೊಂದು ಸೀರೆಯನ್ನು ತಂದೆನಗೆ ಕೊಟ್ಟಂತಾಗಿತ್ತು". ಗಂಡನ ಉತ್ತರ ರೆಡಿ "ನಲ್ಲೆ ಇಂದಿನ ರಾತ್ರಿ ಕನಸಿನಲ್ಲಿ ಅದನುಟ್ಟು ತಿರಗ್ಯಾಡಿ ಬಾ" ಎಂದಾಗ ಅವಳಿಗೆ ನಗಬೇಕೊ-ಅಳಬೇಕೋ ತಿಳಿಯಲಿಲ್ಲ.

(೬)

ಅಂಡಗಚ್ಚಿ ಹಾಕಿ ಕಿವಿಯಲ್ಲಿ ಕೃಷ್ಣ ಮುಖಿ (ಕೊರೆ ಚುಟ್ಟಾ) ಇಟಗೊಂಡು ಸೈಕಲ್ ಹೊಡೆಯುವನ್ನು ಅದಾಗ ಕಲಿತ ಹಳ್ಳಿಯವನೊಬ್ಬನು ಸೈಕಲ್ ಮೇಲೆ ಬಂದ. ಹಳ್ಳಿಯ ಹನಮಂತದೇವರ ಪವುಳಿ ಮೇಲೆ ಸೂಟಿಗೆ ಬಂದ ಶಾಲೆ-ಕಾಲೇಜುಗಳ ಹುಡುಗರ ಹರಟೆ ನಡೆದಿತ್ತು. ಅವರೆಲ್ಲರೆದುರಿಗೆ ಈತ ಸೈಕಲ್ ಸರ್ಕಸ್ ತೋರಿಸುವ ಚಪಲ. ಅಂತೂ ಅವರೆದುರಿಗೇನೇ ಆಕಸ್ಮಾತ್ ಸೈಕಲ್ ಮೇಲೆ ಹಾಕಿಕೊಂಡು ಬಿದ್ದೇಬಿಟ್ಟ. ಅಲ್ಲಿದ್ದ ಶಾಲೆಯ ಹುಡುಗರಿಗೆ ಇಷ್ಟೇ ಬೇಕಿತ್ತು. ಖೊಳ್ ಎಂದು ನಕ್ಕಿದ್ದೇ ನಕ್ಕಿದ್ದು. ಆಗ ಈ ಸೈಕಲ್ ಸವಾರನೆದ್ದು "ಯಾಕ ನಗ್ತೀರೋ ನಿವು, ನಿಮಗ ನಗಾಕ ಕಾರಣಾರ ಬೇಕಲ್ಲ. ನಾ ಸೈಕಲ್ ಮೇಲಿಂದ ಇಳಿಯೋದೇ ಹೀಂಗ" ಎಂದಾಗ ಮತ್ತಷ್ಟು ಇವನ ಚತುರೋಕ್ತಿಗೆ ನಕ್ಕರು.

(೭)

ಹಳ್ಳಿಯ ರಸಿಕ ಶಿರೋಮಣಿಯೊಬ್ಬ ಅದೇ ಊರಿನ ಎಮ್ಮೆ ಕಾಯುವ ಸುಂದರಿಯನ್ನು ಮೋಹಿಸಿ ಹೇಗಾದರೂ

ಅವಳನ್ನು ತನ್ನ ಜಾಲದಲ್ಲಿ ಹಾಕಿಕೊಳ್ಳಲು ಪ್ರಯತ್ನಿಸು ತ್ತಿದ್ದ. ಆಕೆಯ ಸಲುವಾಗಿ ಒಮ್ಮೆ ಎಮ್ಮೆ ಕಾಯುವಲ್ಲಿಗೆ ಈತ ಹೋಗಿ ತನಗೆ ಒಲಿಯಬೇಕೆಂದು, ಅವಳ ಸಲುವಾಗಿ ತಾನು ಏನೆಲ್ಲ ಮಾಡಲೂ ಸಿದ್ಧನೆಂದು ಪರಿಪರಿಯಾಗಿ ಕೇಳಿ ಕೊಂಡ. "ಹಾಗಾದರೆ ಅತಿ ಹೊಲಸಾದ ನನ್ನ ಈ ಎಮ್ಮೆಯ ಮುಖವನ್ನು ನೀನು ಎರಡು ವರ್ಷಗಳವರೆಗೆ ಮುದ್ದಿಸಬೇಕು. ನಂತರ ನಿನಗೆ ಒಲಿಯುತ್ತೇನೆಂದಾಗ ಆತ ಹಾಗೇ ಮಾಡಿದನು. ಎರಡು ವರ್ಷಗಳ ನಂತರ ಆಕೆಯಲ್ಲಿಗೆ ಹೋಗಿ ಈತ ನಿಂತಾಗ ಹೇಳಿದಳು "ನೀನು ಬಹಳೇ ಹೊಲಸಾದ ನನ್ನ ಎಮ್ಮೆಗೆ ಮುದ್ದಿಸಿದ್ದನ್ನು ನೋಡಿ ನಿನ್ನ ನಿಷ್ಠೆಗೆ ಮೆಚ್ಚಿದ್ದೇನೆ. ಆದರೆ ನಾನು ಎಮ್ಮೆಯ ಸವತಿಯಾಗಲು ಸಿದ್ಧಳಿಲ್ಲ ಹೋಗು".

(೮)

ಹಳ್ಳಿಯ ಹುಡುಗನೊಬ್ಬ ಗುಡ್ಡದ ಇಳಿಜಾರಿನಲ್ಲಿ (ವಾರಿ) ಕುರಿ ಮೇಯಿಸುತ್ತಿದ್ದ. ಅಕಸ್ಮಾತ್ ದೆವ್ವನಗಾಳಿಗೆ ಅವನ ಟೊಪ್ಪಿಗೆ ತರಗಲೆಯಂತೆ ಹಾರಿ ಹೋಯಿತು. ಅದನ್ನು ಹಿಡಿಯಲು ಅವನು ಓಡುತ್ತಲೇ ಇದ್ದ. ಕೊನೆಗೆ ಅದೆಲ್ಲೋ ಗಿಡಗಂಟಿಗಳ ಗುಂಪಿನಲ್ಲಿ ಸಿಕ್ಕಿಕೊಂಡು ಅವನಿಗೆ ಸಿಗಲಿಲ್ಲ. ಆದರೆ ಒಂದು ಕಡೆಗೆ ಗಪ್ಪನೇ ನಿಂತುಕೊಂಡ. ಏಕೆಂದರೆ ಅದೇ ಊರಿನ ಇಬ್ಬರು ನವದಂಪತಿಗಳು ವಾಯು ವಿಹಾರಕ್ಕೆ ಹೋಗಿ ಹರಟೆ ಹೊಡೆಯುತ್ತ ಅಲ್ಲಿ ಕುಳಿತಿದ್ದರು. ಪರಸ್ಪರ ಚೆಲುವಿಕೆಯನ್ನು ವರ್ಣಿಸುತ್ತ ಗಂಡ ತನ್ನ ಹೆಂಡತಿಗೆ "ನಿನ್ನ ಮುಖ ಚಂದ್ರ, ಮೂಗು ಸಂಪಿಗೆ, ಹಲ್ಲು ದಾಳಿಂಬ,

ತುಟಿ ತೊಂಡೆಯ ಹಣ್ಣು, ನೀ ನಕ್ಕರೆ ಬೆಳದಿಂಗಳು ಬಿದ್ದಂತಾಗುತ್ತದೆ...ಒಟ್ಟಿನ ಮೇಲೆ ಈ ಲೋಕದ ಸೌಂದರ್ಯ ವೆಲ್ಲವೂ ನನಗೆ ನಿನ್ನ ಮುಖದಲ್ಲಿ ಕಾಣಿಸುತ್ತದೆ ..... " ಎನ್ನುವಷ್ಟರಲ್ಲಿಯೇ ಇದೂ ವರೆಗೆ ತನ್ನ ಟೊಪ್ಪಿಗೆ ಎಲ್ಲಿಯೂ ಕಾಣಿಸಲಾರದೇ ನಿಂತಿದ್ದ ಆ ಹಳ್ಳಿಯ ಹುಡುಗ "ಸಾಹೇಬ್ರ ಹಾಗಾದ್ರ ಅದರಾಗ ನನ್ನ ಟೊಪಿಗಿ ಐತೇನ ಸ್ವಲ್ಪ ನೋಡ್ರಿ" ಎಂದ.

(೯)

ಹಳ್ಳಿಯಲ್ಲಿ ಆಲದಕಟ್ಟೆಮೇಲೆ ಹರಟುತ್ತ ಕುಳಿತಿರುವಾಗ ಒಬ್ಬ "ಲೇ ಚಳಿಯಾದ್ರ ಏನ್ ಮಾಡ್ತೀರಿ ನೀವು ?" ಎಂದೊಬ್ಬ ಕೇಳಿದಾಗ "ಬಿಸಿ ಬಿಸಿ ಚಾ ಕುಡೀತೇನಿ, ಚುಟ್ಟಾ ಸೇದುವೆ, ಒಂದರಮೇಲೊಂದು ಕಂಬಳಿ ಹೊತಗೋತೇನಿ" ಹೀಗೇನೇ ಎಲ್ಲರದೂ ಒಂದೊಂದು ತರಹ ಉತ್ತರ. ಕೊನೆ ಗೊಬ್ಬ ಹಳ್ಳಿಯವ ನಾನು ಗದ-ಗದ ನಡಗ್ತೇನಿ ಅಂದ.

(೧೦)

ಟಿ. ಪಿ. ಕೈಲಾಸಂ ಎಲ್ಲೋ ಒಂದೆಡೆಗೆ "ಅಲಿಬಾಬಾ ಚಾಲೀಸ್ ಚೋರ್" ನಾಟಕ ನೋಡಲು ಹೋಗಿದ್ದರು. ಟಿಕೇಟ್ ಕೊಳ್ಳಲು ಹೋದಾಗ ಅವರು ಬಹಳೇ ದುಬಾರಿ ಹಣವನ್ನು ಪ್ರತಿಯೊಂದು ಟಿಕೇಟ್ಟಿಗೆ ಹೇಳಿದರು. ಪಾಪ ಅವರಿಗೇನು ಗೊತ್ತು ಇವರು ಕೈಲಾಸಂ ಎನ್ನುವುದು. ಆಗ ಕೈಲಾಸಂ "ಹಾಗಾದರೆ ಇನ್ನುಳಿದ ೩೯ ಜನರನ್ನು ನೋಡುವ ಇಚ್ಛೆ ನನಗಿಲ್ಲ" ವೆಂದು ಹಿಂದಿರುಗಿದರು.

(೧೧)

ಶಾಲೆಯಲ್ಲಿ ಗಲಾಟೆ ಮಾಡುವ ಹುಡುಗಿಯೊಬ್ಬಳಿಗೆ ಶಿಕ್ಷಕಿ "ಎಷ್ಟೇ ನಿನ್ನ ಗಲಾಟೆ, ಮನೆಯಲ್ಲಿ ನಿಮ್ಮವ್ವ ಸೊನ್ನೆ-ಸೂಕ್ಷ್ಮತನ ನಿನಗೆ ಕಲಿಸಿಲ್ಲ ನೋಡು. ನಾನಿರಬೇಕಿತ್ತು ನಿಮ್ಮ ಅವ್ವನ ಜಾಗೆಯಲ್ಲಿ ಹೇಳ್ತಿದ್ದೆ ನಿನಗೆ" ಎಂದು ಬಯ್ದು ಗದರಿಸಿದಾಗ ಆ ಹುಡುಗಿ ಅಳುತ್ತ "ಟೀಚರ್ ನಮ್ಮಪ್ಪನಿಗೆ ಕೇಳ್ಕೊಂಡು ಬರ್ತೇನಿ" ಎಂದಳು.

(೧೨)

ಸಣ್ಣ ಮಗುವು ಶಾಲೆಗೆ ಹೋಗುವಾಗ ತಾಯಿ ಮಗುವಿನ ಮುಖವನ್ನು ಮುದ್ದಿಟ್ಟಳು. ಮಗುವು ಸಹ ತನ್ನ ತಾಯಿಗೆ ಎರಡು-ಮೂರು ಮುತ್ತು ಕೊಟ್ಟಾಗ ಅಲ್ಲಿಯೇ ನಿಂತಿದ್ದ ಮಗುವಿನ ತಂದೆ "ನನಗೊಂದು ಮುತ್ತು ಕೊಡು ಮಗು" ಎಂದರು. "ನನಗೆ ವೇಳೆ ಇಲ್ಲಪ್ಪಾ, ಅವ್ವನಿಗೆ ಬಹಳಷ್ಟು ಕೊಟ್ಟೇನಿ ಬೇಕಂದ್ರೆ ಒಂದೆರಡು ಇಸಗೊಳ್ಳು" ಎಂದು ಶಾಲೆಗೆ ಓಡಿತು.

೧೦. ಗ್ರಂಥಋಣ

೧) ಉತ್ತರ ಕರ್ನಾಟಕದ ಗಾದೆಗಳು, ಸಂಪಾದಕರು : ಡಾ॥ ಬಿ. ಬಿ. ಹೆಂಡಿ

೨) ನಮ್ಮ ಒಗಟುಗಳು---ರಾಗೌ

೩) ಜನಪದ ಸಾಹಿತ್ಯದಲ್ಲಿ ಕಿರಿದರೊಳೆ ಪಿರಿದರ್ಥದ ಚಲಕ—ಶ್ರೀ ಸಿಂಪಿ ಲಿಂಗಣ್ಣ

೪) ಹಾಸ್ಯ—ಎಸ್. ವ್ಹಿ. ರಂಗಣ್ಣ

೫) ಜಾನಪದ ಕಥೆಗಳು–ಪ್ರೊ॥ ಎಲ್. ಆರ್. ಹೆಗಡೆ

೬) ಹಾಸ್ಯದ ಲಾಸ್ಯ—ಪ್ರೊ॥ ಜಿ. ಡಿ. ನಾಡಕರ್ಣಿ

೭) ಕನ್ನಡ ಸಾಹಿತ್ಯದಲ್ಲಿ ಹಾಸ್ಯ — ಡಾ॥ ಎಮ್. ಎಸ್. ಸುಂಕಾಪುರ

೮) ಗಾದೆಗಳು—ಡಾ॥ ಎ. ಕೆ. ರಾಮಾನುಜನ್

೯) ಜನಪದ ಕಾವ್ಯದಲ್ಲಿ ಜೀವನಧರ್ಮ— ಪ್ರೊ॥ ಬಿ. ವ್ಹಿ. ಮಲ್ಲಾಪುರ

೧೦) ಗಾದೆಗಳು—ಡಾ॥ ಬಿ. ಬಿ. ಹೆಂಡಿ

೧೧) ಜನಪದ ತ್ರಿಪದಿಗಳು––ಶಾಂತಕುಮಾರಿ ಪಾಟೀಲ

೧೨) ಜನಪದ ಕಥಾಸಂಗಮ—ಡಿ. ಲಿಂಗಯ್ಯ

೧೩) ಇನ್ನಿತರ ಹಲವು ಸಹಾಯಕ ಪುಸ್ತಕಗಳು—ಹಾಡುಗಳು–ಕಥೆ–ಹಲವು ವಿದ್ವಾನ್‌ರ ಭಾಷಣಗಳು–ಮತ್ತು ನಗೆಹನಿ ಮುಂತಾದವುಗಳು.

೧. 'ಜನಪದ ತ್ರಿಪದಿಗಳು'–ಸಂಗ್ರಹಕಾರರು; ಶಾಂತಕುಮಾರಿ ಪಾಟೀಲ

೨. 'ಗರತಿಯ ಹಾಡು'–ಹಲಸಂಗಿ ಗೆಳೆಯ ಬಳಗದವರು.

ಉಪನ್ಯಾಸ ಗ್ರಂಥಮಾಲೆಯ
ಕೆಲವು ಪ್ರಕಟನೆಗಳು

---

೧. ಜನಪದ ಕಾವ್ಯದಲ್ಲಿ ಜೀವನಧರ್ಮ
—ಬಿ. ವ್ಹಿ. ಮಲ್ಲಾಪೂರ

೨. ಜನಪದ ಕಾವ್ಯ —ಗಿರಡ್ಡಿ ಗೋವಿಂದರಾಜ

೩. ಕನ್ನಡದಲ್ಲಿ ತ್ರಿಪದಿ ಸಾಹಿತ್ಯ —ಎಸ್. ಎಸ್. ಕೋತಿನ

೪. ಜನಪದ ಸಾಹಿತ್ಯದಲ್ಲಿ ನೀತಿ —ಎಮ್. ಎನ್. ವಾಲಿ

೫. ಜನಪದದಲ್ಲಿ ಮಕ್ಕಳ ಸಾಹಿತ್ಯ
—ಸಂಗಮೇಶ ಎಂ. ಬಿರಾದಾರ

೬. ಜನಪದ ಸಾಹಿತ್ಯದಲ್ಲಿ ಕಿರಿದರೊಳೆ ಪಿರಿದರ್ಥದ ಚಲಕ
—ಸಿಂಪಿ ಲಿಂಗಣ್ಣ

೭. ಜನಪದ ಸಾಹಿತ್ಯದಲ್ಲಿ ಹಾಸ್ಯ
—ಮೃತ್ಯುಂಜಯ ಹೊರಕೇರಿ

೮. ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ
—ಎಂ. ಬಿ. ಹೂಗಾರ

೯. ಹಬ್ಬಗಳ ಜಾನಪದ ಹಾಡುಗಳು —ಎಂ. ಎನ್. ವಾಲಿ

೧೦. ಜಾನಪದ ಹಾಡುಗಳಲ್ಲಿ ನರಗುಂದ ಬಾಬಾಸಾಹೇಬ
—ಸೋಮಶೇಖರ ಇಮ್ರಾಪೂರ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩.